# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ವೀರರಾಣಿ ಅಪ್ರಮೇಯಿ (ದಶಮಗ್ರಹ ವಿಜಯ)

ಕವಿ

## ಅಗರಿ ಭಾಸ್ಕರ ರಾವ್

ಅಂತರಜಾಲ ಆವೃತ್ತಿ ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦ ಜನವರಿ ೨೦, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com Blog: www.yakshaprasangakosha.com

## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರು ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್ , ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾರ್ಯವಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಕಾಲ್ಪನಿಕ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಸೇವಧಿ ಪ್ರಕಾಶನ (ಹೇರಂಜೆ ಕೃಷ್ಣ ಭಟ್ಟ)

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೨೧೮

**ಪಾತ್ರಗಳು:**

ಶ್ರೀಕೃಷ್ಣ – ಜಗನ್ನಿಯಾಮಕ, ಹಂಸಧ್ವಜ - ಚಂಪಕಾಪುರದ ರಾಜ, ಅರ್ಜುನ – ಮಧ್ಯಮ ಪಾಂಡವ, ಪ್ರಮೀಳೆ - ಸ್ತ್ರೀರಾಜ್ಯದ ಒಡತಿ, ನಾಗಚಿತ್ರ - ಅಭಿಸಾರದೇಶದ ರಾಜ, ಹಂಸಧ್ವಜನ ಅಳಿಯ, ಶಂಖಲಿಖಿತರು - ಪುರೋಹಿತರು, ಮುನಿಪುಂಗವರು, ಸುಪ್ರತಾಪ - ಸುಧನ್ವನ ಮಗ, ಅಪ್ರಮೇಯಿ - ಪ್ರಮೀಳೆಯ ಮಗಳು, ನಾರದ – ದೇವಋಷಿ, ರೌದ್ರಕರ್ಮ - ಭೀಷಣನ ಮಗ ರಾಕ್ಷಸವೀರ, ಚಂಡಮುಖ - ರೌದ್ರಕರ್ಮನ ಅನುಯಾಯಿ, ಸಿಂಹಮುಖ - ರೌದ್ರಕರ್ಮನ ಅನುಯಾಯಿ, ವಿಲಾಸಿನಿ - ನಾಗಚಿತ್ರನ ಮಗಳು ಸ್ವೇಚ್ಛಾಚಾರಿಣಿ, ಮಾಯಾ ರೌದ್ರಕರ್ಮ - ರೌದ್ರಕರ್ಮನ ಮಾಯರೂಪ (ಸುಂದರಾಂಗ), ನಾಗಕೇತ - ನಾಗಚಿತ್ರನ ಸೇನಾಧಿಪತಿ, ನಾಗವರ್ಮ - ನಾಗಚಿತ್ರನ ಮಂತ್ರಿ, ಚಾರಕರು, ದೂತಿಯರು, ಬೇಟೆಗಾರರು, ಸಖಿಯರು

**ಕಥಾಸಾರಾಂಶ:**

ಚಂಪಕಾವತಿಯಲ್ಲಿ ಸುಧನ್ವನ ಮಡದಿ ಪ್ರಭಾವತಿಗೆ ಪುತ್ರಜನನ. ಕುವಲೆಯ ಗಂಡ ನಾಗಚಿತ್ರನಿಂದ ಮಗು ಅನೈತಿಕ ಎಂದು ಹೇಳಿ ಹಂಸದ್ವಜನಿಗೆ ಅವಮಾನ ಮಾಡಿ ಹೋಗುವುದು. ಮಗುವಿಗೆ ಸುಪ್ರತಾಪನೆಂಬ ನಾಮಕರಣ. ಅವನು ದೊಡ್ಡವನಾದಾಗ ವನವಿಹಾರಕ್ಕೆ ಹೋದಾಗ ಪ್ರಮೀಳೆಯ ಮಗಳು ಅಪ್ರಮೇಯಿಯು ಬಾಣ ಹೊಡೆದು ಉರುಳಿಸಿದ ಮೃಗ ತಾನು ಹೊಡೆದು ಉರುಳಿದ್ದೆಂದು ಸುಪ್ರತಾಪನ ವಾದ. ಯುದ್ಧ. ಪ್ರಣಯಾಂಕುರ. ಗಾಂಧರ್ವ ವಿವಾಹ. ತಾಯಿ ಪ್ರಮೀಳೆಯ ಆತಂಕ. ಅರ್ಜುನನಲ್ಲಿಗೆ ದೂರು. ಅರ್ಜುನ ಸುಪ್ರತಾಪರ ಯುದ್ಧ. ನಾರದರ ಆಗಮನ, ಮದುವೆ ಸುಖಾಂತ್ಯ. ಅರ್ಜುನನಿಂದ ಸೋತು ಓಡಿದ ರೌದ್ರಕರ್ಮನೆಂಬ ರಾಕ್ಷಸನಿಂದ ಅಭಿಸಾರಿಕಾಪುರದ ರಾಜ ನಾಗಚಿತ್ರನ ಮಗಳು ವಿಲಾಸಿನಿಯ ಅಪಹಾರ. ಸುಪ್ರತಾಪನಿಂದ ರಾಕ್ಷಸನ ಸಂಹಾರ. ವಿಲಾಸಿನಿಯ ಪ್ರೇಮಭಿಕ್ಷೆ. ತಂದೆ ನಾಗಚಿತ್ರನಿಂದ ಸುಪ್ರತಾಪನಿಗೆ ಅವಮಾನ, ಯುದ್ಧ. ನಾರದರಿಂದ ಸಮಾಧಾನ ಮದುವೆ ಸುಖಾಂತ್ಯ.

**ಕವಿ ಪರಿಚಯ :**

ಅಗರಿ ಭಾಸ್ಕರ ರಾಯರು (ಜನನ 1948) ಭಾಗವತರಾದ ಅಗರಿ ಶ್ರೀನಿವಾಸ ರಾಯರ ಮಗ, ತಾಯಿ ರುಕ್ಮಿಣಿ, ಪತ್ನಿ ಜಲಜಾಕ್ಷಿ. ಸ್ವತಃ ಭಾಗವತರೂ ಹೌದು. ಸುಮಾರು ಮುವತ್ತಕ್ಕೂ ಹೆಚ್ಚು ಪ್ರಸಂಗಗಳನ್ನು ರಚಿಸಿದ್ದಾರೆ. ಕೆಲವು ಹಸ್ತಪ್ರತಿಗಳು ಅವರಲ್ಲೂ ಲಭ್ಯವಿಲ್ಲ. ಇವರ ಗುಂಡಬಾಳ ಕ್ಷೇತ್ರ ಮಹಾತ್ಮೆ ಅತ್ಯಂತ ಹೆಚ್ಚು ಪ್ರದರ್ಶನ ಕಂಡಿದೆ. ಸುರತ್ಕಲ್ ಮೇಳ, ಧರ್ಮಸ್ಥಳ ಮೇಳಗಳಲ್ಲಿ ಇವರ ಪ್ರಸಂಗಗಳು ಪ್ರದರ್ಶನಗೊಂಡಿವೆ. ಸುಂದರ ಸರಳ ಪದ್ಯಗಳನ್ನು ರಚಿಸಿದ್ದಾರೆ. ತುಳುವಿನಲ್ಲೂ ಪ್ರಸಂಗಗಳನ್ನು ರಚಿಸಿದ್ದಾರೆ.

ಇವರು ಬರೆದ ಪ್ರಸಂಗಗಳು: ಅಂಗಾರವರ್ಮ ಕಾಳಗ, ಅಗಸ್ತ್ಯ ಮಹರ್ಷಿ, ಏಕಾದಶಿ ಮಹಾತ್ಮೆ, ಗುಂಡಬಾಳ ಕ್ಷೇತ್ರ ಮಹಾತ್ಮೆ, ತಪಸ್ವೀ ಮಹೇಂದ್ರ, ದಶಮಗ್ರಹ ವಿಜಯ (ವೀರ ರಾಣಿ ಅಪ್ರಮೇಯಿ), ಧರ್ಮ ವಿಜಯ (ಮನಮೆಚ್ಚಿದ ಮಡದಿ), ನಾಗಚಂದ್ರಿಕಾ (ಷಡ್ಜನ್ಮ ಮೋಕ್ಷ), ನಾಡ ಕೇದಗೆ, ನ್ಯಾಯ ಕೀರ್ತಿ ವಿಜಯ, ಪೆರ್ಡೂರು ಕ್ಷೇತ್ರ ಮಹಾತ್ಮೆ, ಬಗ್ಗು ಪಂಜುರ್ಲಿ ಪ್ರತಾಪ, ಬರ್ಬರೀಕ ಪ್ರತಾಪ, ಭಕ್ತ ಪ್ರಹ್ಲಾದ, ಭಸ್ಮಾಸುರ ಕಾಳಗ, ರುದ್ರಾಂತರ್ಗತ ಲಕ್ಷ್ಮೀನರಸಿಂಹ, ಶ್ರೀ ಕದ್ರಿ ಕ್ಷೇತ್ರ ಮಹಾತ್ಮೆ, ಶ್ರೀ ದೇವಿ ತ್ರಿಕರ್ಣೇಶ್ವರಿ ಮಹಾತ್ಮೆ, ಶ್ರೀರಾಘವೇಂದ್ರಮಹಾತ್ಮೆ (ಶ್ರೀ ಮಂತ್ರಾಲಯ ಮಹಾತ್ಮೆ), ಶ್ರೀ ವಾಣೀ ವಿಲಾಸ, ಶ್ರೀ ಹರಿ ಲೀಲಾರ್ಣವ, ಶ್ರೀವಿಶ್ವಕರ್ಮಮಹಾತ್ಮೆ, ಸಮುದ್ರ ಮಥನ, ಸುಂದೋಪಸುಂದ ಕಾಳಗ, ಹಯಗ್ರೀವ ದೇವೋದ್ಭವ

**ಟಿಪ್ಪಣಿ :**

# ಪ್ರಸಂಗ ಸಾಹಿತ್ಯ

**ಶಾರ್ದೂಲವಿಕ್ರೀಡಿತಂ**
ತುಂಗಾತೀರವಿರಾಜಿತಂ ಶುಭಕರಂ ಮಾರ್ತಾಂಡಕೋಟಿಪ್ರಭಂ |
ಸಂಗೀತಾದಿಸಮಸ್ತಶಾಸ್ತ್ರನಿಪುಣಂ ಶ್ರೀಮಧ್ವತತ್ವಾನ್ವಿತಂ ||
ಭಕ್ತಾನಾಂ ವರದಂ ಸುರುಚಿರಂ ಕಲ್ಯಾಣಕಲ್ಪದ್ರುಮಂ |
ಶ್ರೀಮತ್ಸದ್ಗುರುರಾಘವೇಂದ್ರಯತಿಪಂ ಧ್ಯಾಯಾಮಿ ಚಿತ್ತೇ ಸದಾ || ೧ || [೧]

**ದ್ವಿಪದಿ**
ಗಜವದನನಡಿಗೆರಗಿ ಹರಿಗೆ ತಲೆಬಾಗಿ |
ತ್ರಿಜಗವಂದಿತ ಹರನ ಪಾದಗಳಿಗೆರಗಿ || ೧ ||
ಶಾರದೆಯ ಸ್ಮರಿಸುತ್ತ ಧರೆಯ ಕವಿಗಳನು |
ಭೂರಿ ತೋಷದಿ ನುತಿಸಿ ಭಕ್ತಿಯೊಳು ನಾನು || ೨ ||
ಬೆಣ್ಣೆಮನೆ ಗೋಪಾಲಕೃಷ್ಣರೆಂದೆನುವ |
ಸನ್ಮಿತ್ರರೊದಗಿಸಲು ವರ ಕಥಾನಕವ || ೩ ||
ತಿಳಿದಂತೆ ಬರೆದೆನಿದ ಯಕ್ಷಗಾನದಲಿ |
ಇಳೆಯೊಳಗೆ ಮೆರೆಯಲಿದು ಹರಿಯ ದಯದಲ್ಲಿ || ೪ || [೫]

**ಶ್ರೀ - ತ್ರಿವುಡೆ**
ಹರಿಯ ಸಮ್ಮುಖದೊಳಗೆ ನಡೆದುದು |
ಕರಿಪುರದಿ ಹಯಮೇಧ ಬಳಿಕಾ |
ನೆರೆದ ಧರಣಿಪರೆಲ್ಲ ಕೃಷ್ಣನಿ | ಗೆರಗುತಂದು || ೧ ||
ತೆರಳುತಿದ್ದರೆ ಚಂಪಕಾಪುರ |
ದರಸ ದುಮ್ಮಾನದೊಳಗೈದುತ |
ಹರಿಯ ದರುಶನಕೆಂದು ಬಂದರೆ | ತವಕದಿಂದಾ || ೨ || [೭]

**ಭಾಮಿನಿ**
ಪರಮವೈಷ್ಣವತಿಲಕನಂದಾ |
ಮುರಹರನ ಪದಕೆರಗೆ ಕಾಣುತ |
ಶರಣನನು ಪಿಡಿದೆತ್ತಿ ಕರುಣದಿ ಭಕ್ತವತ್ಸಲನು ||
ಒರೆದನಾತಗೆ ಹಂಸಕೇತನೆ |
ಧರೆಯೊಳಗೆ  ನೀ ಗೈದ ಕಾರ್ಯಕೆ |
ಹರುಷವೈ ಸರಿ ಕಾಣೆ ನಿನಗೆನೆ ಮಣಿಯುತಿಂತೆಂದ || ೧ || [೮]

**ಬೇಗಡೆ - ಅಷ್ಟ**
ಲಾಲಿಪುದು ವನಮಾಲಿ ನೀ ದಯದಿ | ಸನಕಾದಿವಂದ್ಯನೆ |
ಪಾಲಿಸೆನ್ನ ಪರಾಕೆ ಸಂತಸದಿ ||
ಖೂಳರನು ಸದೆಬಡಿದು ಯಮಜಗೆ |
ಲೀಲೆಯಿಂದೊಲಿದಿತ್ತೆ ಧರಣಿಯ |
ಪೇಳಲರಿಯೆನು ನಿನ್ನ ಮಹಿಮೆಯ |
ಫಾಲನೇತ್ರನ ಸಖನೆಯಿಂದಿಲಿ || ೧ ||
ಎಂದ ಚಂಪಕಧರಣಿಪನ ಕಂಡು | ಮುರಮಥನ ಪೇಳಿದ |
ಬಂಧುಹತ್ಯಾಪಾತಕವ ಕಳೆದು ||
ಚಂದದೊಳಗಿಪ್ಪವನು ಧರ್ಮಜ |
ಇಂದು ಪೊಗಳಲದೇಕೆ ತನ್ನನು |
ಬಂದ ಹದನವದೇನು ಪೇಳ್ಳೈ |
ಕಂದಿ ಹೋಗಿದೆ ನಿನ್ನ ವದನವು || ೨ ||

ಯಾತಕೀತೆರ ನುಡಿವೆ ಶ್ರೀಹರಿಯೆ | ಭೂಭಾರ ತಗ್ಗಿಸೆ |
ಭೂತಳದೊಳವತರಿಸಿ ಬಂದಿರುವೆ ||
ಪಾತಕವು ನೂರಾರು ಪದವಿಯ |
ನೋತುಕೊಂಡಿರುವವಗೆ ಸಹಜವು |
ಜಾತರಳಿವಿಗೆ ಮನದ ಮರುಕದಿ |
ಕಾತರದಿ ನಿನ್ನೆಡೆಗೆ ಬಂದೆನು || ೩ ||
ಕಳೆದುದಕೆ ಮರುಗಿದರೆ ಫಲವುಂಟೆ | ಧರೆ ಮೂರರೊಳಗಾ |
ಕಲಿ ಸುಧನ್ವನ ಛಲಕೆ ಎಣೆಯುಂಟೆ ||
ಇಳೆಯಧಿಪ ತವ ಸೊಸೆಯು ಗರ್ಭವ |
ತಳೆದಿಹಳು ತೆರಳೀಗ ವಂಶವ |
ಬೆಳಗಿಸುವ ಕುಡಿಯನ್ನೆ ಕಾಣುವೆ |
ಇಳೆಯೊಳಗೆ ಬಲು ಖ್ಯಾತಿ ಪಡೆಯುವ || ೪ ||
ಎಂದು ಶ್ರೀಹರಿ ನುಡಿಯೆ ಲಾಲಿಸುತ | ಧರಣಿಪನು ಮುದದೊಳು |
ಇಂದಿರಾಧವನಿಂಗೆ ವಂದಿಸುತ ||
ಚಂದದೊಳು ಪೇಳಿದ ಪ್ರಭಾವತಿ |
ಕಂದನೋರ್ವಗೆ ಜನ್ಮವೀವಳೆ |
ಹೊಂದಿ ತವ ದಯ ನಮ್ಮ ವಂಶಕೆ |
ಚಂದವಾದುದು ನೋಡಲೆಂದಿಲಿ || ೫ ||
ಘನಪರಾಕ್ರಮಿಯೆನಿಸಿ ಮೆರೆಯುವನು | ತವ ಮೊಮ್ಮ ನೋಡಲು |
ಜನಪದವ ಧರ್ಮದಲಿ ಪೊರೆಯುವನು ||
ಮನದಿ ಸಂಶಯ ಬೇಡ ತೆರಳೈ |
ಜನಪತಿಯೆ ನೀ ಪುರಕೆ ಶೀಘ್ರದಿ |
ವನಿತೆಯನು ಬೋಳೈಸಿ ಧೈರ್ಯವ |
ಮನದಿ ತುಂಬಲು ಪುರದ ಜನರಿಗೆ || ೬ || [೧೪]

**ವಾರ್ಧಕ**

ಚಿನುಮಯನ ನುಡಿ ಕೇಳಿ ಇಳೆಯಾಣ್ಮ ಮುದ ತಾಳಿ |
ಮನದ ಶಂಕೆಯ ಕಳೆದು ತೆರಳೆ ತನ್ನಯ ಪುರಕೆ |
ವನಜನಾಭನ ಪಾದಕೆರಗಿಯಪ್ಪಣೆಗೊಂಡು ಭೂಮಿಪರು ತೆರಳುತಿರಲು ||
ಮನಸಿಜನ ಶರಹತಿಗೆ ಬಳಲಿ ಬೆಂಡಾಗುತ್ತ |
ತನುವು ಝುಮ್ಮೆನ್ನುತಿರೆ ವರ ಪ್ರಮೀಳೆಯು ತನ್ನ |
ಇನಿಯನಹ ಮೂರುಲೋಕದ ಗಂಡ ಪಾರ್ಥನೆಡೆ ಲಜ್ಜೆಯೊಳು ನಡೆತಂದಳು || ೧ || [೧೫]

**ಕೇದಾರಗೌಳ - ಅಷ್ಟ**

ಜಡಜಮುಖಿಯ ಕಂಡು | ಸಡಗರಗೊಳುತಾಗ |
ಕಡುಗಲಿ ಗಾಂಡೀವಿಯು ||
ಒಡನೆದ್ದು ಸಂತಸ | ಪಡುತಲಾ ವನಿತೆಯ |
ಪಿಡಿದಪ್ಪಿ ಪೇಳಿದನು || ೧ ||
ನೀಳವೇಣಿಯೆ ಮುದ್ದು | ಲೋಲಾಕ್ಷಿ ಸುಗುಣೆ ಪ್ರ |
ಮೀಳೆ ಚಂದಿರವದನೆ ||
ಲೀಲೆಯಿಂದೈದಿದ | ಪರಿಯ ಪೇಳೀಗ ಸು |
ಶೀಲೆ ನಳಿನಲೋಚನೆ || ೨ ||
ಮೂರುಲೋಕದ ಗಂಡ | ವೀರಮಾರ್ತಾಂಡ ಶೃಂ |
ಗಾರ ಕಲಾನಿಪುಣ ||
ಮಾರಸನ್ನಿಭ ನಿನ್ನ ಸೇರಿ ಸುಖಿಸಲೆಂದು |
ಸಾರಿ ಬಂದೆನು ರಮಣ || ೩ ||
ತುರಗಾಧ್ವರದ ಸಂಭ್ರ | ಮದಿ ನಿನ್ನ ಮರೆತೆನು |
ಅರಸಿ ನೀ ಮರುಗದಿರು ||
ಸರಿ ಸಮಯವು ಇಂದೆ | ಹರಿಯ ನೆನೆದು ನಿನ್ನ |
ಹರುಷದಿ ಕೂಡುವೆನು || ೪ ||

ನಿನ್ನಂಗ ಸುಖಪೊಂದಿ | ಕನ್ಯೆಯೋರ್ವಳ ನಾನು |
ಎನ್ನುದರದಿ ಪಡೆಯೆ ||
ಧನ್ಯಳಾಗುವೆನೆಂದು ಮನದಾಸೆಯೊರೆಯಲು |
ಮನ್ನಿಸಿ ಸಂತೋಷದಿ || ೫ ||
ಜಗದೇಕ ತರುಣಿಯ | ಬಿಗಿದಪ್ಪಿ ಪ್ರೇಮದಿ |
ಅಗಣಿತೋಲ್ಲಾಸದಿಂದ ||
ಸೊಗಸು ಮೆರೆಯಲಂದು | ಮೃಗವಿಲೋಚನೆಯೊಳ |
ಮಿಗೆ ಹರುಷದಿ ಕೂಡಿದ || ೬ || [೨೧]

**ಭಾಮಿನಿ**
ಮಾರನಾಟದಿ ತೃಪ್ತಿಪೊಂದಿದ |
ನಾರಿಮಣಿಯು ಕಿರೀಟಿಗೆರಗುತ |
ಸಾರಿದಳು ಪುರಕೆಂದೆ ಹರುಷದಿ ಇತ್ತ ಲಾಲಿಪುದು ||
ಧಾರುಣೀಪತಿ ಹಂಸಕೇತನು |
ಸೇರಿ ತನ್ನಯ ಪುರಕೆ ಕಂಡನು |
ವಾರಿಜಾಂಬಕಿ ಗರ್ಭ ತಳೆದಿಹಳೆಂಬ ಹದನವನು || ೧ || [೨೨]

**ವಾರ್ಧಕ**
ಮೆರೆವ ಚಂಪಕಪುರದೊಳೇಕಾದಶೀವ್ರತವ |
ನಿರತವಾಚರಿಸಿದ್ದ ಘನಪುಣ್ಯಫಲವೆನಲು |
ಸರಸಿಜಾಂಬಕಿ ಪ್ರಭಾವತಿ ಪುತ್ರರತ್ನನನು ಶುಭಮುಹೂರ್ತದಿ ಹಡೆದರೆ ||
ಧರಣಿಪನ ಸಂಭ್ರಮವನೆಂತು ಬಣ್ಣಿಸಲಂದು |
ವರ ಸೂನುವಿಗೆ ನಾಮಕರಣಗೈವರೆ ತನ್ನ |
ತರಳೆ ಕುವಲೆಗೆ ವಾರ್ತೆಯರುಹಲ್ಕೆ ಕಳುಹಿದನು ದೂತರನು ಜವದೊಳಾಗ || ೧ || [೨೩]

**ಕಾಂಬೋಧಿ - ಝಂಪೆ**
ಇತ್ತ ಅಭಿಸಾರಪುರ | ಪೃಥ್ವಿಪನು ವರ ನಾಗ |
ಚಿತ್ರನೋಲಗದಿ ರಂಜಿಸಲು ||
ಉತ್ತಮದ ಸಿಂಹವಿ | ಷ್ಟರದಿ ಕುಳಿತಾ ನೃಪತಿ |
ವೃತ್ರಾರಿಯಂದದಲಿ ಮೆರೆದಾ || ೧ ||
ವರ ಚಂಪಕಾಪುರದ | ಧರಣಿಪನ ಸುಕುಮಾರಿ |
ಸರಸಿಜಾಂಬಕಿ ಕುವಲೆಯನ್ನು ||
ಹರುಷದೊಳು ಪರಿಣಯವ | ಗೈದು ತಾ ಮೆರೆದಿರಲು |
ಧರೆಯೊಳಗೆ ಭೂಮಿಪನು ಮುದದಿ || ೨ ||
ಹಿಂದೆಯಾ ರಾಜಸೂ | ಯಾಧ್ವರದ ನೆಪದೊಳಗೆ |
ಬಂದು ಕಲಿಪಾರ್ಥ ಕಾಳಗದಿ ||
ತಂದೆಯಹ ಚಿತ್ರಸೇ | ನನ ಗೆಲಿದ ರೋಷದಿ ವ |
ಸುಂಧರೇಶನು ಕುದಿಯುತಿದ್ದ || ೩ ||
ಭಾವಂದಿರನು ತರಿದ | ಗೋವಳನ ಸನಿಹಕ್ಕೆ |
ಮಾವ ಕಾಣಿಕೆ ಸಹಿತಲೈದಿ ||
ಸೇವೆಗೈದಿಹನೆಂಬ | ಈ ವಾರತೆಯ ಕೇಳಿ |
ಮಾವನಲಿ ಖತಿಯ ತಾಳಿದ್ದ || ೪ ||
ಅನಿತರೊಳು ಚಾರಕರು | ಜನಪತಿಯ ಚರಣಕ್ಕೆ |
ಮಣಿಯೆ ಕಾಣಿಕೆ ಸಹಿತ ಕಂಡು ||
ಘನ ಹರುಷದಲಿ ಬಂದ | ಹದನವೇನೆಂದೆನಲು |
ವಿನಯದೊಳಗೆಂದರಾ ಚರರು || ೫ || [೨೪]

**ಮುಖಾರಿ - ಆದಿ**
ಪೃಥ್ವೀಶ ಲಾಲಿಸೆಮ್ಮ ನುಡಿಯ | ಚಂಪಕಪುರದ |
ಭೃತ್ಯರು ಪಾಲಿಸೆಮ್ಮ ಜೀಯ ||
ಉತ್ತಮ ವಾರ್ತೆಯ | ಬಿತ್ತರಿಪಡೆ ನಾ |
ವಿತ್ತ ಬಂದೆವೈ | ಚಂಪಕಪುರದಿಂ || ೧ ||
ವೀರಸುಧನ್ವಕಾಂತೆ ನಿನ್ನ | ಸುಕುಮಾರನಿಂಗೆ |
ನಾರಿ ತಾ ಜನ್ಮವನೀಯೆ ಜಾಣೆ ||
ಧಾರುಣಿಪತಿ ಸಂ | ಭ್ರಮಗೊಳುತಲಿ ಈ |
ವಾರತೆ ನಿಮಗೊರೆ | ವರೆ ಕಳುಹಿದನೈ || ೨ ||
ವರ ನಾಮಕರಣ ಮಹೋತ್ಸವಕೆನುತ | ನಿಮ್ಮೆಲ್ಲರನ್ನು |
ಬರಹೇಳಿ ಕಳುಹಿದನೆಮ್ಮನಾತ ||
ಧರಣಿಪ ನಿನ್ನಯ | ಅರಸಿ ಸಹಿತ ನೀ |
ಬರುವುದು ನಮ್ಮಯ | ಪುರವರಕೆಂದನೆ || ೩ || [೩೧]

**ಸೌರಾಷ್ಟ್ರ - ತ್ರಿವುಡೆ**
ಚಾರಕರ ನುಡಿ ಕೇಳಿ ಭೂಮಿಪ |
ಭೂರಿ ಚೋದಿಗ ಹೊಂದಿ ಪೇಳಿದ |
ಜಾರೆಯಾದಳೆ ಕಲಿಸುಧನ್ವನ | ನೀರೆ ಜಗದಿ || ೧ ||
ಧುರಕೆ ತೆರಳುವ ಮುನ್ನ ಈಕೆಯ |
ಸರಸದಲಿ ಕೂಡಿಪ್ಪ ಮಾತ್ರಕೆ |
ತರಳೆ ಗರ್ಭವ ತಳೆದಳೆಂತದ | ಅರಿಯದಾದೆ || ೨ ||
ಹಿಂದೆ ಸುದತಿಯ ನೆರೆಯಲಿಲ್ಲವೆ |
ಸೌಂದರಿಗೆ ಅದರಿಂದ ಗರ್ಭವು |
ಬಂದುದಿಲ್ಲವು ನೋಡೆ ಜಾರಿಣಿ | ಬಂಧುಗಳನು || ೩ ||
ಮರುಳುಗೈಯುವ ಹದನವಾಯಿತು |
ಅರಸಿ ಸಹಿತಲೆ ತೆರಳಲೇತಕೆ |
ದುರುಳೆ ಗೈದಿಹ ಕಾರ್ಯ ಮಾವಗೆ | ಒರೆವೆನೆನುತ || ೪ ||
ನಾಗಚಿತ್ರನು ರಥವನೇರುತ |
ವೇಗದೊಳು ತಾ ಸಾರಿ ಬಂದರೆ |
ಆಗ ಕಂಡಾ ಹಂಸಕೇತ ಸ | ರಾಗದಿಂದ || ೫ || [೩೭]

**ಕಾಪಿ - ಅಷ್ಟ**
ಬಂದೆಯೇನೈ ನಾಗಚಿತ್ರ | ಬಲು |
ಚಂದವಾದುದು ನೋಡೆ ಲೋಕಪ್ರಖ್ಯಾತ ||
ಸುಂದರಾಂಗಿಯ ಕಾಣೆ ನಾನು | ಕ್ಷೇಮ |
ದಿಂದಿರುವಳೆ ಕುವಲೆ ಪೇಳಯ್ಯ ನೀನು || ೧ || [೩೭]

**ಮಾರವಿ - ಏಕ**
ಕುಶಲವು ನಮಗಿಂ | ದಿಲೆ ಬರಹೇಳಿದ |
ವಿಷಯವದೇನೆನುತ ||
ರಸೆಯಧಿಪನು ನುಡಿಯಲು ಕೇಳುತಲವ |
ನಸುನಗುತಲಿ ನುಡಿದ || ೧ || [೩೮]

**ಕಾಪಿ - ಅಷ್ಟ**
ಮತಿವಂತ ಕೇಳಿಲ್ಲವೇನು | ಪ್ರಭಾ |
ವತಿ ಪುತ್ರನಿಗೆ ಜನ್ಮವಿತ್ತ ವಾರ್ತೆಯನು ||
ಕ್ಷಿತಿಯ ಜನರು ಮುದಗೊಳಲು | ನಾಳೆ |
ಅತಿಶಯ ನಾಮಕರಣವೆಂಬುದಿರಲು || ೧ || [೩೯]

**ಮಾರವಿ - ಏಕ**
ಪತಿಯಿಲ್ಲದೆ ತಾ | ಸುತನನು ಹಡೆದಳೆ |
ಮತಿಯುತೆ ಲೇಸಾಯ್ತು ||
ಮತಿಹೀನನೆ ಇದ | ಕೇತಕೆ ಸಂಭ್ರಮ |
ಸತಿಯಳ ಹೊರದೂಡು || ೧ || [೪೦]

**ಕಾಪಿ - ಅಷ್ಟ**
ಧುರಕೆಂದು ತೆರಳುವ ಮುನ್ನ | ತನ್ನ |
ಅರಸಿಯ ಕೂಡಿದ ತರಳ ಸುಧನ್ವ ||
ಉರಿವೆಣ್ಣೆ ಕೊಪ್ಪರಿಗೆಯಲಿ | ಹಾಕೆ |
ತರಳ ತಾನುಳಿದ ಶ್ರೀಹರಿಯ ದಯೆಯಲಿ || ೧ || [೪೧]

**ಮಾರವಿ - ಏಕ**
ಋತುಸ್ನಾತೆಯನವ | ನೆರೆದುದು ಪ್ರಥಮವೆ |
ಕಥನವು ಬೇಡೆನಗೆ ||
ಕ್ಷಿತಿಪನೆ ತವ ಸೊಸೆ | ಕುಲಟೆಯು ಜಾರಿಣಿ |
ಮತಿಹೀನಳು ನೋಡೆ || ೧ || [೪೨]

**ಕಾಪಿ - ಅಷ್ಟ**
ಕೆಟ್ಟ ಯೋಚನೆಯೇಕೆ ನಿನಗೆ | ಶ್ರೀ |
ಕೃಷ್ಣನಾಣತಿಯಂತೆ ನಡೆದಂಥ ಬಗೆಗೆ ||
ಸಿಟ್ಟು ಮಾಡದಿರು ತನ್ನಲ್ಲಿ | ಎಂದ |
ಸೃಷ್ಟಿಪನಿಗೆ ಖೂಳನೆಂದ ತಾ ಕನಲಿ || ೧ || [೪೩]

**ಭೈರವಿ - ಏಕ**
ಮಾವನ ನುಡಿಯನು ಕೇಳಿ | ಆ |
ಭೂವರ ಕ್ರೋಧವ ತಾಳಿ ||
ಭಾವನ ಸುತನವನಲ್ಲ | ಆ |
ಗೋವಳ ಶಿವನೇನಲ್ಲ || ೧ ||
ಭಾವನ ಕೊಂದಂಥವರಾ | ನೀ |
ಸೇವೆಯ ಗೈದ ವಿಚಾರ ||
ಮಾವನೆ ಅರಿತಿಹೆ ನಾನು | ಬಲು |
ಕೋವಿದ ಗೈದುದು ಏನು || ೨ ||
ಮನ್ನಿಸಲಾರೆನು ನಾನು | ಸೊಸೆ |
ಯೆನ್ನುವ ಮೋಹದಿ ನೀನು |
ಉನ್ನತ ದ್ರೋಹವ ಬಗೆದೆ | ಕೇಳ್ |
ಎನ್ನ ವಿಚಾರವ ಮುಂದೆ || ೩ || [೪೪]

**ಭಾಮಿನಿ**
ನೀತಿಹೀನರ ಮನೆಗೆ ನಿನ್ನಯ |
ಜಾತೆಯಳ ಕಳುಹಿಸೆನು ಎನ್ನುತ |
ಭೂತಳೇಶನ ಜರೆದು ಪೊರಟರೆ ಕಂಡು ಭೂಮಿಪನು ||
ಯಾತಕೀ ತೆರ ಬುದ್ಧಿ ಬಂದಿತೊ |
ನಾ ತಿಳಿಯೆನೀ ನಾಗಚಿತ್ರನ |
ಯಾತುಧಾನರ ವೈರಿ ಪೊರೆಯಲಿ ಎನ್ನುತಾಶಿಸಲು || ೧ || [೪೫]

**ಸಾಂಗತ್ಯ - ರೂಪಕ**
ಅನಿತರೊಳಲ್ಲಿಗೆ | ಶಂಖಲಿಖಿತರೈದಿ |
ಜನಪಗೆ ಧೈರ್ಯವನೊರೆದು ||
ಮನದಿ ಮರುಗಲೇಕೆ | ಚಿನುಮಯನೆಂದಂತೆ |
ಘನ ನಾಮಕರಣಗೈಯುವದು || ೧ ||
ವರ ಪ್ರಭಾವತಿಸುತ | ಜನಿಸಿದ ವೇಳೆಯ |
ನರಿತು ತೋಷದಿ ಪೇಳ್ವರಂದು ||
ಹರಿಶರಣನು ಈತ | ಪರಮಧಾರ್ಮಿಕನಾಗಿ |
ತರಣಿತೇಜದಿ ಮೆರೆಯುವನು || ೨ ||
ಕ್ಷಿಪ್ರದಿ ರಿಪುಗಳ | ದರ್ಪವನಡಗಿಸಿ |
ಕಪ್ಪ ಕಾಣಿಕೆಯ ಕೈಗೊಂಬ ||
ಅಪ್ರತಿಮನ ಮುದ | ವೆತ್ತು ಕರೆದರಂದು |
ಸುಪ್ರತಾಪನು ಎನುತಾಗ || ೩ || [೫೦]

**ವಾರ್ಧಕ**
ಲಾಲಿಸಿರಿ ಮುದದಿಂದ ಸುಪ್ರತಾಪನು ಮುಂದೆ |
ಮೇಲೆನಿಪ ಸಕಲವಿದ್ಯೆಗಳ ಗುರುಮುಖದಿಂದ |
ಲೀಲೆಯಿಂದರಿತು ಗುರುತರ ಪರಾಕ್ರಮಿಯೆನಿಸಿ ಮೆರೆಯೆ ಚಂಪಕಪುರದಲಿ ||
ಬಾಲಕಗೆ ಹದಿನಾರು ವರುಷ ತುಂಬಿರೆ ನೋಡೆ |
ಲೀಲೆಯೊಳಗೊಂದು ದಿನ ವನವಿಹಾರದ ನೆಪದಿ |
ಬಾಲಕರ ನೆರವಿಯೊಳು ವೀರ ತಾ ಪೊರವಂಟನೇನೆಂಬೆ ಸಂಭ್ರಮದಲಿ || ೧ || [೫೧]

**ಮುಖಾರಿ - ಆದಿ**
ಆಡುತಾಡುತ್ತ ಬಂದನಾಗ | ಪ್ರಭಾವತಿತನಯ |
ಆಡುತಾಡುತ್ತ ಬಂದನಾಗ ||
ಆಡುತ ನಡೆತರೆ | ಕಾಡಿನೊಳಂದಿಲಿ |
ರೂಢಿಪ ಮೊಮ್ಮನು | ಮೋದವ ತಳೆಯುತ || ೧ || [೫೨]

**ಕಾಂಬೋಧಿ - ಝಂಪೆ**
ಇತ್ತಲಿಂತಿರೆ ಕೇಳಿ | ರತ್ನ ಸ್ತ್ರೀರಾಜ್ಯದೊಳು |
ಮತ್ತಕಾಶಿನಿ ಜನ್ಮವೀಯೆ ||
ಉತ್ತಮದ ಪೆಣ್ಣು ಶಿಶು | ಅಪ್ರಮೇಯಿಯು ಎನುತ |
ವೃತ್ತಕುಚೆ ಬೆಳೆದಿರಲು ಕಂಡು || ೧ ||
ಜನನಿಯೋಲಗದೆಡೆಗೆ | ವನಜಾಕ್ಷಿ ನಡೆತರಲು |
ತನಯಳನು ನೋಡಿ ತೋಷದಲಿ ||
ಮಣಿದ ಪುತ್ರಿಯನೆತ್ತಿ | ಬಿಗಿದಪ್ಪಿ ಮುದ್ದಿಸುತ |
ಮನದ ಬಯಕೆಯದೇನು ಪೇಳು || ೨ || [೫೪]

**ಸುರುಟಿ - ಏಕ**
ಲಾಲಿಸು ಮಮ ಜನನಿ | ಕರುಣದಿ |
ಪಾಲಿಸು ಮಹಾರಾಣಿ ||
ಲೀಲೆಯೊಳಗೆ ತವ | ಬಾಲೆಯ ನುಡಿಯನು |
ಆಲಿಸಿ ಕರುಣದಿ | ಪಾಲಿಸುಯಿಂದಿಲಿ || ೧ ||
ವಿದ್ಯೆ ಬುದ್ಧಿಗಳನು | ಕಲಿತಿಹೆ |
ಶ್ರದ್ಧೆಯಿಂದ ನಾನು ||
ಯುದ್ಧದೊಳೆನ್ನನು | ಎದುರಿಪರಾರೈ |
ಬುದ್ಧಿಯುತಳೆ ತವ | ಮುದ್ದಿನ ಕುವರಿಯ || ೨ ||

ಅರಿಕೆಯೊಂದ ಕೇಳು | ಸಖಿಯರ |
ನೆರವಿಯೊಡನೆ ನಾನು ||
ತೆರಳುವೆ ವನದೊಳು | ವಿಹರಿಸಲೆನ್ನುತ |
ಕರುಣದೊಳಪ್ಪಣೆ | ಪಾಲಿಪುದಿಂದಲಿ || ೩ ||
ತರಳೆಯ ನುಡಿ ಕೇಳಿ | ಪ್ರಮೀಳೆಯು |
ಒರೆದಳು ಭಯ ತಾಳಿ ||
ಕರಡಿ ಹುಲಿಗಳಿಹ | ವನದಲಿ ವಿಹರಿಸೆ |
ತೆರಳುವುದೇತಕೆ | ಕಿರಿಯವಳಾಗಿರೆ || ೪ || [೫೮]

**ಮಾರವಿ - ಏಕ**
ಮಾತೆಯೆ ನಿನಗಿ | ನ್ನೇತಕೆ ಭಯ ತವ |
ಜಾತೆಯು ಸಣ್ಣವಳೆ ||
ಭೂತಳದಲಿ ಎನ | ಗಿದಿರಾರಿಹರೈ |
ಕಾತರ ಬಿಡು ಮನದಿ || ೧ ||
ಹರಿಯುದರದಿ ಬಡ | ಕುರಿ ಮೆಯ್ಯಳೆವುದೆ |
ಧುರವಿಕ್ರಮಿ ನಿನ್ನ ||
ತರಳೆಯ ಶರಗಳಿ | ಗಿರುವುದೆ ಬಾಲ್ಯವು |
ಹರುಷದಿ ಕಳುಹೆನ್ನಾ || ೨ || [೬೦]

**ಭಾಮಿನಿ**
ತರಳೆಯಾಡಿದ ನುಡಿಯ ಕೇಳುತ |
ಹರುಷಗೊಂಡು ಪ್ರಮೀಳೆ ಕುವರಿಯ |
ಹರಿಯೆ ರಕ್ಷಿಸಲೆನ್ನುತಪ್ಪಣೆ ಕೊಟ್ಟು ಕಳುಹಿಸಲು ||
ಸರಸಿಜಾಂಬಕಿ ತನ್ನ ಸಖಿಯರ |
ನೆರವಿಯೊಡನಾ ವನವಿಹಾರಕೆ |
ಬರುತಲಿದ್ದಳು ಸುಪ್ರತಾಪನು ಬರುವ ವನದೆಡೆಗೆ || ೧ || [೬೧]

**ಮುಖಾರಿ - ಆದಿ**
ಬೇಟೆಯಾಡುತ್ತ ಬಂದಳಾಗ | ಪ್ರಮೀಳೆಯ ಕುವರಿ |
ಬೇಟೆಯಾಡುತ್ತ ಬಂದಳಾಗ ||
ಸಾಟಿಯಿಲ್ಲದೆ ಮಿಗ | ಬೇಟೆಯನಾಡುತ |
ನೋಟಕೆ ಸಿಲುಕಿದ | ಮಿಗಗಳ ತರಿಯುತ || ೧ || [೬೨]

**ವಾರ್ಧಕ**
ಇತ್ತಲಾ ಸುಪ್ರತಾಪನು ವಿಹರಿಸುತ ವನದಿ |
ಅರ್ತಿಯಿಂದಲಿ ಬರಲು ಹರಿಣವೊಂದನು ಕಂಡು |
ಉತ್ತಮದ ಶರ ಹೂಡೆ ಗಾಯಗೊಂಡಾ ಮಿಗವು ಅಪ್ರಮೇಯಿಯ ಸನಿಹಕೆ ||
ಮೃತ್ಯುಭಯದಿಂದೈದೆ ಕಂಡು ಸಂತಸಗೊಂಡು |
ವೃತ್ರಕುಚೆ ಶರ ಹೂಡಿ ಕೆಡಹಲ್ಕೆ ಮಿಗವ ಬೆಂ |
ಬತ್ತಿದಾ ಸುಪ್ರತಾಪನು ಬಂದು ಹರಿಣವನು ಕೊಂಡೊಯ್ಯೆನೆನುತಲಿರಲು || ೧ || [೬೩]

**ಮಧುಮಾಧವಿ - ಅಷ್ಟ**
ಯಾರಯ್ಯಾ | ನೀನು | ಯಾರಯ್ಯಾ || ಪಲ್ಲ ||
ಯಾರಯ್ಯ ನೀನೀಗ ಬಂದುದೆಲ್ಲಿಂದ |
ವೀರ ನಿನ್ನಯ ಕಾರ್ಯ ತೋರದು ಚಂದ ||
ಶೂರತನದಿ ನಾನು ಹರಿಣವ ಕೆಡೆದೆ |
ಚೋರತನದಿ ಬಂದೆ ಸೆಳೆದೊಯ್ಯಲೆಂದೆ || ೧ ||

ಜಲಜಾಕ್ಷಿ ಮಾತಿನೊಳಗೆ ನೀನು ಚತುರೆ |
ನುಡಿಯದಿರೀ ತೆರ ತರಳೆ ನೀನಬಲೆ ||
ಕೆಡೆದೆನೀ ಮಿಗವ ನಾನೆನ್ನ ಬಾಣದಲಿ |
ಹುಡುಗಾಟ ಬೇಡೆನೆ ತರಳೆ ತಾ ಕನಲಿ || ೨ ||
ಧಾರುಣಿಪನ ಸುಕುಮಾರನಂತೆಸೆವೆ |
ಭೂರಿ ದರ್ಪದ ಮಾತು ನಿನಗಿಂದು ತರವೆ ||
ಧಾರುಣಿಯೊಳಗೆನ್ನ ಗೆಲಲಾರಿಗರಿದು |
ಸಾರು ನೀನತ್ತ ಹರಿಣದಾಸೆ ತೊರೆದು || ೩ ||
ಮತ್ತಕಾಶಿನಿಯೊಳು ಕಾದುವನಲ್ಲ |
ವ್ಯರ್ಥ ಮಾತುಗಳೇಕೆ ಛಲವು ತರವಲ್ಲ ||
ವೃತ್ತಕುಚೆಯೆ ಸಿಟ್ಟು ಬರಿಸದಿರೆನಗೆ |
ಪೃಥ್ವಿಯೊಳೀ ಮಿಗ ತರಿದವ ನಾನೆ || ೪ || [೬೭]

**ಶಂಕರಾಭರಣ - ಮಟ್ಟೆ**
ಚೋರತನದಿ ಬಂದ ನಿನಗೆ | ಧಾರುಣಿಯೊಳು ತಕ್ಕಶಾಸ್ತಿ |
ತೋರಿಸುವೆನು ನಿಲ್ಲು ಧುರಕೆ | ವೀರತನದಲಿ || ೧ ||
ತರಳೆಯೊಡನೆ ಕಾದಲೆಂತು | ಒರೆದೆ ಧರ್ಮಮಾರ್ಗ ನಿನಗೆ |
ಬರಿದೆ ಹರಿಣದಾಸೆ ಬಿಟ್ಟು | ತೆರಳು ಒಳ್ಳಿತು || ೨ ||
ನಾರಿಯಾದರೇನು ಇಂದು | ವೀರತನಕೆ ಕೊರತೆಯುಂಟೆ |
ತೋರಿಸುವೆನು ಧುರದೊಳೆನುತ | ನಾರಿ ಜರೆಯಲು || ೩ ||
ಸಿಟ್ಟಿನಿಂದ ಬಾಣಗಳನು | ಬಿಟ್ಟರಾಗ ಖಂಡಿಸುತ್ತ |
ದಿಟ್ಟ ಸುಪ್ರತಾಪನಂದು | ಧುರವನೆಸಗಿದ || ೪ || [೭೧]

**ವಾರ್ಧಕ**
ಸೋಲು ಗೆಲುವರಿಯದೆಯೆ ಕಾದಿದರು ಸಮಬಲದಿ |
ಮೂಲೋಕ ಬೆರಗಾಗೆ ಅಪ್ರಮೇಯಿಯು ಬಳಿಕ |
ತಾಳುತಚ್ಚರಿ ಸುಪ್ರತಾಪನಾ ಸಾಹಸಕೆ ಮನಮೆಚ್ಚಿ ತಲೆದೂಗುತಾ ||
ಕಾಳಗದ ನಡುವೆಯನುರಾಗದಿಂ ತಡವರಿಸೆ |
ಪೇಳಲೇನಾ ಸಮಯ ಸಿಂಜಿನಿಯ ಖಂಡಿಸಲು |
ನೀಳವೇಣಿಯು ಮನದಿ ಬೆರಗಾಗಿ ತನ್ನೊಳಗೆ ನುಡಿದಳೀ ತೆರದೊಳಂದು || ೧ || [೭೨]

**ಮಧುಮಾಧವಿ - ಅಷ್ಟ**
ಸಮರದೊಳೆನ್ನನ್ನು ಗೆಲ್ಲುವರಿಲ್ಲ |
ಸುಮಶರ ಕಾದಲು ಬಿಡಲಾರನಲ್ಲ ||
ಅಮಿತವಿಕ್ರಮಿ ಸುಂದರಾಂಗ ನೋಡಿದರೆ |
ರಮಣನ ಮಾಡಿಕೊಂಬೆನು ಈಗ ಛಲರೆ || ೧ ||
ಮೋಸವಾದುದು ಸಮರವ ಗೈದು ನಾನು |
ಭಾಸುರಾಂಗನ ಮೃದುಮನ ನೋಯಿಸಿದೆನು ||
ತೋಷದೊಳಿವನ ನಾ ಮಾತನಾಡಿಸುವೆ |
ಲೇಸಾಗಿ ಮನದಿರವೇನೆಂಬುದರಿವೆ || ೨ || [೭೪]

**ಶಂಕರಾಭರಣ - ಆದಿ**
ತರುಣವೀರ ಪೇಳು ತನಗೆ |
ಧುರವ ಗೈದ ವೇಳ್ಯದೊಳಗೆ |
ತರಿದೆಯೆನ್ನ ಸಿಂಜಿನಿಯನು | ತರವದೇನೆಲ || ೧ ||
ಸರಸಿಜಾಕ್ಷಿ ತರುಣಿಯರಿಗೆ |
ಧುರವು ತರವೆ ಪುರುಷರೊಡನೆ |
ಸುರತಕೇಳಿ ಹೊರತು ಸಮರ | ಕೊಡಗಿ ಬರುವರೆ || ೨ ||

ಮಾತಿನಂತೆ ನಡೆಯೊ ನೀನು |
ಸೋತುಪೋದೆ ನಿನಗೆ ನಾನು |
ಯಾತಕಿನ್ನು ವೇಳೆ ಸುರತ | ಕೇಳಿಗೊದಗೆಲ || ೩ ||
ಬಂಧು ಬಳಗವಿಲ್ಲವೇನೆ |
ಸುಂದರಾಂಗಿ ನಿನಗೆ ಪೇಳು |
ಹೊಂದದೀಗ ನಿನ್ನ ಬಯಕೆ | ಧರ್ಮಬಾಹಿರ || ೪ || [೭೮]

**ಸಾಂಗತ್ಯ - ರೂಪಕ**

ಮೂರುಲೋಕದ ಗಂಡ | ಪಾರ್ಥನ ಸುಕುಮಾರಿ |
ವೀರ ಪ್ರಮೀಳೆಯ ಕುವರಿ ||
ಧಾರುಣಿಯೊಳಗಪ್ರ | ಮೇಯಿಯು ನಾನಿಹೆ |
ವೀರ ನೀನಾರೆಂದು ಪೇಳು || ೧ ||
ಜಲಜಮುಖಿಯೆ ಕೇಳು | ಕಡುಗಲಿ ಪಾರ್ಥನ |
ತಡೆದು ಕಾಳಗದಿ ಕಾದಿರುವ ||
ಮೃಡಸಖಭಜಕ ಸು | ಧನ್ವನ ತರಳನು |
ಪೊಡವಿಯೊಳಗೆ ಸುಪ್ರತಾಪ || ೨ ||
ಉತ್ತಮವಂಶಸಂ | ಜಾತರು ನಾವೀಗ |
ಅರ್ತಿಯಿಂದಲಿ ಕೂಡಿ ಬೆರೆವ ||
ಚಿತ್ತದಿ ಯೋಚನೆ | ಯೇತಕೆ ನಿನಗೆಂದು |
ಮತ್ತಕಾಶಿನಿ ಪೇಳಲಂದು || ೩ ||
ಎನಲೆಂದ ಸ್ವಾರ್ಜಿತ | ರಾಜ್ಯವದೆನಿಗಿಲ್ಲ |
ಜನಪದದೊಳಗೆ ನೋಡಲಿಕೆ ||
ವಿನುತ ಸ್ತ್ರೀವಿತ್ತವ | ಬಯಸೆನು ನಿಜದೊಳು |
ನಿನಗೆ ನಾ ತಕ್ಕವನೆಂತು || ೪ ||
ಅಷ್ಟಸಿದ್ಧಿಯ ಬಲ್ಲ | ತರುಣಿ ನಾನಿರುತಿರೆ |
ಇಷ್ಟದೊಳಿಂದು ವರಿಸಿದೊಡೆ ||
ಸೃಷ್ಟಿಸುವೆನು ರಾಜ್ಯ | ಸೇರಿತು ನಿನಗೆಂದು |
ದಿಟ್ಟ ಧರ್ಮವನೊರೆಯಲಿಕೆ || ೫ || [೮೩]

**ಭಾಮಿನಿ**

ಅಪ್ರಮೇಯಿಯು ನುಡಿಯ ಲಾಲಿಸಿ |
ಸುಪ್ರತಾಪನು ನುಡಿದ ನಗುತಲಿ |
ಒಪ್ಪವಂತಹ ಮಾತನಾಡಿದೆ ತರುಣಿ ನೀನೆನುತ ||
ಕ್ಷಿಪ್ರದಲಿ ಮನ ಬೆಸೆದುದೆಮ್ಮಯ |
ತಪ್ಪಬಾರದು ತರುಣಿಮಣಿ ನಾ |
ನೊಪ್ಪಿದೆನು ಗಾಂಧರ್ವವಿಧಿಯಲಿ ನಿನ್ನ ಕೂಡುವೆನು || ೧ || [೮೪]

**ಕಂದ**

ಅಂದಾ ಜನಪನ ನೇಮದಿ |
ಸುಂದರಿ ಸೃಜಿಸಲ್ ಪುರವರನೊಂದಾ ಮುದದೊಳ್ ||
ಚಂದದಿ ಮೆರೆಯಿತು ಜಗದಲಿ |
ಮುಂದಕೆ ವರ ಕಾಕತೀಯ ಪುರವರವೆನುತಂ || ೧ || [೮೫]

**ಸಾರಂಗ - ಅಷ್ಟ**

ವರ ಪ್ರಮೀಳೆಯ ತರಳೆ | ಸುಕುಮಾರನ |
ಕರಪಿಡಿಯಲು ಚಂಚಲೆ ||
ಅರಿತ ದೂತಿಯರಂದು | ಬೇಗಾಗಿ ಅರಸಿಗೆ |
ಒರೆವೆ ನಾವಿದನೆಂದು | ಭರದಿಂದ ಬಂದರು || ೧ ||

ಲಾಲಿಸಬೇಕು ತಾಯೆ | ತವಜಾತೆಯು |
ಲೀಲೆಯಿಂದಲಿ ತೆರಳೆ ||
ಮೇಲಾದ ವನದೊಳು | ವಿಹರಿಸಲೆನ್ನುತ |
ನೀಳವೇಣಿಯ ಜೊತೆ | ನಾವುಗಳೈದಲು || ೨ ||
ವನದೊಳು ತರಳನೋರ್ವ | ತವ ಸುತೆಯಳ |
ಕೆಣಕಿ ಗೈಯಲು ಧುರವಾ ||
ವನಜಾಕ್ಷಿ ಮೋಹವ | ತಳೆದಾಗಲಾತನ |
ಸನುಮತದಲಿ ಕೂಡಿ | ಕೊಂಡಳೇನೆಂಬೆನು || ೩ || [೮೮]

**ಸೌರಾಷ್ಟ್ರ - ತ್ರಿವುಡೆ**

ದೂತಿಯರ ನುಡಿ ಕೇಳುತಾಗಲೆ |
ಜಾತೆಗೈದಿಹ ಕೃತ್ಯಕಂದಾ |
ಭೂತಳವು ತಾ ನಡುಗುವಂದದಿ | ರೋಷದಿಂದ || ೧ ||
ಏನಿದಚ್ಚರಿಯಿಂದು ನಮ್ಮಯ |
ಸ್ಥಾನಮಾನಕೆ ಚ್ಯುತಿಯ ತಂದಳೆ |
ಕಾಣಬೇಕೆಂದೆನುತ ಗರ್ಜಿಸಿ | ಪೊರಟು ಬರಲು || ೨ || [೯೦]

**ಕಂದ**

ಅಂದಾ ಮಾತೆಯ ಕಾಣುತ |
ಚಂದದಿ ವಂದಿಸಲು ಕುವರಿಯನೊದೆದು ಗರ್ಜಿಸೆ ||
ಸುಂದರಿ ವಿಸ್ಮಯಗೊಳುತಂ |
ಇಂದೀ ರೋಷಕೆ ಕುವರಿಯ ತಪ್ಪೇನೆಂದಳ್ || ೧ || [೯೧]

**ಸೌರಾಷ್ಟ್ರ - ತ್ರಿವುಡೆ**

ಏನು ಗೈದಿಹೆ ಮಗಳೆ ನಮ್ಮಯ |
ಸ್ಥಾನಮಾನವದೇನು ನೋಡಲು |
ಕ್ಷೋಣಿಯಲಿ ಮತಿಹೀನಳಂದದಿ | ನೀನು ನೋಡೆ || ೧ ||
ತಪ್ಪುಗೈದವಳಲ್ಲ ತವ ಸುತೆ |
ಅಪ್ರಮೇಯಿಯು ತನ್ನ ಮನದಲಿ |
ಒಪ್ಪಿಕೊಂಡವನನ್ನು ವರಿಸಲು | ತಪ್ಪು ಇಹುದೆ || ೨ ||
ಕ್ಷೋಣಿಯಲಿ ಸ್ತ್ರೀರಾಜ್ಯತರುಣಿಯು |
ಮಾನಗೇಡಿಯ ತೆರದಿ ಪುರುಷನ |
ತಾನೆ ವರಿಸಲು ಬಹುದೆ ನೀತಿಯೆ | ಪೇಳು ತನಗೆ || ೩ ||
ಹಿಂದೆ ಪಾರ್ಥನ ಕೂಡಲಿಲ್ಲವೆ |
ಚಂದದಿಂದಲಿ ಮಾತೆ ನೀನೀ |
ಕುಂದ ಸುತೆಯೊಳದೇನ ಕಂಡೆಯ | ಇಂದು ಪೇಳು || ೪ || [೯೫]

**ಶಂಕರಾಭರಣ - ಮಟ್ಟೆ**

ಎದುರುವಾದಗೈವೆ ಪ್ರಾಯ | ಮದವು ದುರುಳೆ ನೋಡಲೆನ್ನ |
ಉದರದಲ್ಲಿ ಪುಟ್ಟಿದಕ್ಕೆ | ನಾಚಿಕೊಂಬೆನು ||
ಕದನಕೆಂದು ಕರೆಯೆ ನಿನ್ನ | ಸದರದಿಂದ ಕೂಡಿದವನ |
ರುಧಿರವನ್ನೆ ತೆಗೆದು ಬಲಿಯ | ಮುದದಿ ಕೊಡುವೆನು || ೧ ||
ಇನಿತು ಸಣ್ಣ ಕಾರ್ಯಕೆನ್ನ | ಇನಿಯನೇಕೆ ಎನ್ನ ಕೂಡೆ |
ಸೆಣಸಿ ನಿನ್ನ ಶೌರ್ಯವನ್ನು | ತೋರಿಸೆನ್ನೊಳು ||
ಕಣೆಗಳನ್ನು ಸುರಿಸಲಾಗ | ವನಿತೆ ಪಥದಿ ಖಂಡಿಸುತ್ತ |
ಎಣಿಕೆಯಿಲ್ಲದಸ್ತ್ರ ಸುರಿಸೆ | ತನುಜೆಗೆನ್ನುತ || ೨ || [೯೭]

**ಭಾಮಿನಿ**
ತರಳೆಯನು ಗೆಲಲರಿಯದಂದಾ |
ಸರಸಿಜಾಂಬಕಿ ಧುರವ ನಿಲಿಸುತ |
ಒರೆವೆನೀ ಹದನವನು ಪಾರ್ಥಗೆಯೆನುತ ಪೊರವಂಟು ||
ಅರುಹಲೆಲ್ಲವ ವರ ಕಿರೀಟಿಗೆ |
ಕೆರಳಿ ಪಾರ್ಥನು ಧುರಕೆ ಬರುತಿರೆ |
ಅರಿತು ಬಂದಾ ಸುಪ್ರತಾಪನು ನರನ ತಡೆಯಲ್ಕೆ || ೧ || [೯೮]

**ಭೈರವಿ - ಅಷ್ಟ**
ಯಾರೆಲೊ ತರಳ ನೀನು | ಮಮ ಸುತೆಯಳ |
ಹಾರಿಸಿ ತಂದೆಯೇನು ||
ವೀರ ಪಾರ್ಥನು ನಾನೆ | ಅರಿತುಕೊ ತರುಣಿಯ |
ಘೋರನೊಪ್ಪಿಸು ತನಗೆ || ೧ ||
ನಿನ್ನಂತೆ ಗೈದುದಿಲ್ಲ | ನೋಡಲು ಪರ |
ಹೆಣ್ಣ ನಾ ಕದ್ದುದಿಲ್ಲ ||
ಎನ್ನ ನಂಬಿದ ಸತಿ | ಯನ್ನು ಬಿಡೆನು ನೋಡು |
ನಿರ್ಣಯ ಕೇಳೆನ್ನಲು || ೨ ||
ತರಳ ನಿನ್ನಯ ಪಿತನು | ಎನ್ನೊಳು ಹಿಂದೆ |
ಧುರಗೈದು ಮಡಿದಿಹನು ||
ತರವಲ್ಲ ಧುರವೀಗ | ತರಳೆಯನೊಪ್ಪಿಸಿ |
ಹರಣವನುಳಿಸಿಕೊಳ್ಳು || ೩ ||
ಪಿತನ ಕೊಂದವನೆ ನೀನು | ಅರಿತೆನು ನಿನ್ನ |
ಅತಿಶಯ ಶೌರ್ಯವನು ||
ಕ್ರತುಪತಿ ಹರಿಯಿರೆ | ಮೆರೆದೆಯ ನೀನೆಂದು |
ಖತಿಯೊಳು ಶರ ಸುರಿದ || ೪ || [೧೦೨]

**ಸೌರಾಷ್ಟ್ರ - ತ್ರಿವುಡೆ**
ಇಂತು ನಾನಾ ವಿಧದಿ ಕಾದಲು |
ಕಂತುಪಿತನಾ ಭಕುತರೀರ್ವರು |
ನಿಂತು ನೋಡಲು ಸುರರು ನಭದಲಿ | ಸಂತಸದಲಿ || ೧ ||
ಗೆಲುವು ಕಾಣದೆ ಧುರವು ನಡೆದರೆ |
ಜಲಜನಾಭನ ಸ್ಮರಿಸುತಂದಾ |
ಜಲಜಭವಸುತನಲ್ಲಿಗೈದಿದ | ತವಕದಿಂದ || ೨ ||
ಬಂದು ನಾರದ ಧುರವ ನಿಲಿಸುತ |
ಲೆಂದನಾಕ್ಷಣ ಏನಿದೇನೈ |
ಮಂದಮತಿ ನೀನಾದೆ ಪಾರ್ಥನೆ | ಇಂದು ನೋಡು || ೩ ||
ಸತ್ಯಸಂಧನು ಪರಮಧಾರ್ಮಿಕ |
ಪೃಥ್ವಿಯೊಳು ಹರಿಶರಣನೀತನು |
ಉತ್ತಮದ ಮಧುಧ್ವಜ ವಂಶಜ | ವರಿಸಿರಲ್ಕೆ || ೪ ||
ಪರಮವಿಕ್ರಮಿ ನೋಡೆ ಜಗದಲಿ |
ಧುರದಿ ಸೋಲನು ಕಾಣನಿವ ತವ |
ತರಳೆಯನು ವರಿಸಿರಲು ಅಳಿಯನು | ನಿನಗೆ ನೋಡೆ || ೫ ||
ಕಾಳಗವದೇಕಿಂದು ನೋಡಲು |
ಲೋಲನಯನೆಯ ಒಪ್ಪಿಸೀತಗೆ |
ಮೇಲೆನಿಸಿದವರುಗಳ ಹರಸು ಪ್ರ | ಮೀಳೆ ಸಹಿತ || ೬ ||
ಎಂದು ನಾರದ ಹರಸಿ ತೆರಳಲು |
ಚಂದದಿಂದಲಿ ಪಾರ್ಥ ತರಳೆಯ |
ಸುಂದರಾಂಗಗೆ ಒಪ್ಪಿಸಿದ ಆ | ನಂದಗೊಂಡು || ೭ ||

ತರಳನೋರ್ವನು ಜನಿಸೆ ಮಂದಕೆ |
ಇರಿಸೆ ಪೆಸರ ಪ್ರತಾಪರುದ್ರನು |
ಧರೆಯೊಳಗೆ ವರ ಸುಪ್ರತಾಪನು | ಮೆರೆಯುತಿರಲು || ೮ || [೧೦೯]

**ಕಾಂಬೋಧಿ - ಝಂಪೆ**
ಇತ್ತ ಕಾನನದೊಳಗೆ | ಖಳ ಬಕನ ಮೊಮ್ಮ ವರ |
ಧೂರ್ತ ಭೀಷಣನ ಸುಕುಮಾರ ||
ಪೃಥ್ವಿಯಲಿ ವರ ರೌದ್ರ | ಕರ್ಮನೆಂದೆಂಬ ಖಳ |
ಮೊತ್ತವನು ನೆರಹಿಕೊಂಡಿರಲು || ೧ ||
ಚಂಡಮುಖ ಸಿಂಹಮುಖ | ರೆಂದೆಂಬ ಸಹಚರರ |
ಗಂಡುಗಲಿ ಕೂಡಿಕೊಂಡಿರಲು ||
ಭಂಡ ತಾನೊಂದು ದಿನ | ಕರೆಯಲ್ಕೆ ದೈತ್ಯನೆಡೆ |
ದಂಡುವೆರಸುತ ಬಂದರಂದು || ೨ || [೧೧೧]

**ಭೈರವಿ - ಏಕ**
ಕರಸಿದುದೇತಕೆ ನಮ್ಮ | ಅದ |
ನೊರೆ ದೈತ್ಯಾಧಿಪ ನಿಮ್ಮ ||
ವರ ವಿಕ್ರಮಿಗಳ ಕೂಡೆ | ಮನ |
ದಿರವನು ನಡೆಸುವೆ ನೋಡೆ || ೧ ||
ಅರಿಗಳು ಮುತ್ತಿಹರೇನು | ಸುರ |
ನರರನು ಲೆಕ್ಕಿಸೆ ನಾನು ||
ಕುರಿಯನು ಹರಿ ಲೆಕ್ಕಿಪುದೆ | ಆ |
ಹರಿ ಬಂದರು ಬಿಡೆ ನೋಡೆ || ೨ ||
ಹಿಂದಕೆ ಪಿತನ ಕಿರೀಟಿ | ತಾ |
ಕೊಂದಿಹ ಕಾಳಗ ನಡೆಸಿ ||
ಅಂದಾ ಬಕನನು ಭೀಮ | ತಾ |
ಕೊಂದರೆ ಮರುಗುವೆನಮಮ || ೩ ||
ಮರುಗದಿರೈ ದೈತ್ಯೇಶ | ನೆನೆ |
ದರೆಯದು ರೋಷಾವೇಶ ||
ದುರುಳರು ಪಾಂಡವರನ್ನು | ಕಡಿ |
ದುರುಳಿಸೆ ಪೊರಡುವೆ ನಾನು || ೪ ||
ತಡೆ ತಡೆ ವಾರ್ತೆಯ ತಿಳಿದೆ | ಆ |
ಕಡುಗಲಿ ಪಾರ್ಥನು ಇಂದೆ ||
ಸಡಗರದಲಿ ಬಹನಿಲ್ಲಿ | ಕ್ಷಣ |
ತಡೆಯದೆ ಕಾದುವೆ ಕನಲಿ || ೫ ||
ದಕ್ಷಿಣಪಥಕೈದಿದನೆ | ಕರೆ |
ರಾಕ್ಷಸಪಡೆಗಳ ನಾನೆ ||
ದಕ್ಷತೆಯಲಿ ಕಾದುವೆನು | ಎನು |
ತಾಕ್ಷಣ ದೈತ್ಯಾಧಮನು || ೬ ||
ಕಂಡಾ ನರನನು ಪಥದಿ | ಮುಂ |
ಕೊಂಡು ತಡೆದು ಕಾಳಗದಿ ||
ಚಂಡಮುಖನು ತಡೆಯಲ್ಕೆ | ಅದ |
ಕಂಡಾ ಪಾರ್ಥನು ಧುರಕೆ || ೭ || [೧೧೮]

**ಮಾರವಿ - ಏಕ**
ಫಡ ದೈತ್ಯನೆ ನೀ | ತಡೆದೆಯ ಯೆನ್ನನು |
ಕಡುಸೋಜಿಗ ತನಗೆ ||
ನುಡಿ ನೀನಾರೈ | ತಡೆಯಲು ಕಾರಣ |
ಧಡಿಗನೆ ಪೇಳೆನಲು || ೧ ||

ಹಿರಿಯರು ಬಕ ಭೀ | ಷಣರನು ತರಿದಿಹ |
ದುರುಳನ ಬಿಡಲುಂಟೆ ||
ತರಿದಟ್ಟುವೆ ಯಮ | ನಾಲಯಕಿಂದೇ |
ಧುರ ಕೊಡು ತನ್ನೊಳಗೆ || ೨ ||
ಭೀಷಣದೈತ್ಯನ | ಭೃತ್ಯರೆ ನೋಡಲು |
ಲೇಸಾದುದು ಯಮನ ||
ಪಾಶವು ಕಾದಿದೆ | ನೋಡೆಂದೆನುತಲಿ |
ದೂಷಿಸಿದನು ಖಳನ || ೩ ||
ಕಾಲನ ಅತಿಥಿಗ | ಳಾರೆಂಬುದ ಈ |
ಕಾಳಗದಲಿ ನೋಡು ||
ತಾಳಿಕೊ ಕರಹತಿ | ಯೆನುತಲಿ ಮುಂಬರೆ |
ಖೂಳನ ಕೆಡಹಿದನು || ೪ || [೧೨೨]

**ಭೈರವಿ - ಅಷ್ಟ**

ಅನಿತರೊಳ್ ಸಿಂಹಮುಖ | ಕಲಿಪಾರ್ಥನ |
ಕೆಣಕುತ್ತಲೆಂದ ಧೂರ್ತ ||
ದನುಜರ ಗೆಲಿದಿಹ | ಹೆಮ್ಮೆ ನಿಲಿಪೆ ನೋಡು |
ಕ್ಷಣದೊಳು ನಿಜವೆನ್ನುತ || ೧ ||
ಪೆಟ್ಟು ತಾಳದೆ ಪೋದರು | ಶರಹತಿಗೆಲ್ಲ |
ಸೃಷ್ಟಿಯೊಳೊರಗಿದರು ||
ದುಷ್ಟ ನಿನ್ನನು ಸಹ | ಕುಟ್ಟಿ ಕೊಲ್ಲುವೆನೆಂದು |
ಬಿಟ್ಟರೆ ಬಾಣಗಳ || ೨ ||
ಬಾಯೊಳಗಾಡಿದಂತೆ | ಸುಲಭವೆ |
ಕಾರ್ಯವು ನೋಡು ಪಿಂತೆ ||
ಸ್ತ್ರೀಯರ ಮುಂದೆ ನೀ | ಕೊಚ್ಚಿಕೊಂಡಂತಲ್ಲ |
ರಾಯನೆ ಬಿಡೆನು ನಿನ್ನ || ೩ ||
ಎಂದು ಜರೆದು ಖಳನು | ಕಲಿಪಾರ್ಥನೊ |
ಳಂದು ತಾ ಕಾದಿದನು ||
ಸಂದರೆ ಯಮಪುರ | ಕಂದು ಕಾಣುತಲಿದ |
ಬಂದನಾ ರೌದ್ರಕರ್ಮ || ೪ || [೧೨೬]

**ಪಂಚಾಗತಿ - ಮಟ್ಟೆ**

ಧಿರುರೆ ಪಾರ್ಥ ನಿನ್ನ ಕಂಡು ಹರುಷವಾಯಿತು |
ಧುರದಿ ನಿನ್ನ ಶೌರ್ಯ ಕಾಂಬ ಭಾಗ್ಯ ಬಂದಿತು ||
ತರಿದೆ ನಮ್ಮ ಹಿರಿಯರನ್ನು ಹಿಂದೆ ಧುರದಲಿ |
ದುರುಳ ನಿನ್ನ ತರಿಯಲೆಂದೆ ಬಂದೆನಿಂದಿಲಿ || ೧ ||
ಮಾತಿನೊಳಗೆ ಜಾಣನಹುದು ರೌದ್ರಕರ್ಮನೆ |
ಪಾತಕಿಗಳ ಬಿಡೆನು ನಾನು ಮೊದಲ ಸೂಚನೆ ||
ಯಾತಕೆನ್ನ ತಡೆದೆ ಪಥದಿ ನಿನ್ನ ಮರಣಕೆ |
ಧೂರ್ತ ನೀನೆ ಕರ್ತೃವಾದೆ ಒದಗು ಕದನಕೆ || ೨ ||
ತಿಳಿದೆ ಕುಂತಿತನಯರೊಳಗೆ ನೀನೆ ವೀರನು |
ಅಳಿಯೆ ನೀನು ಪಾಂಡವರನು ಗಣ್ಯ ಮಾಡೆನು ||
ಸುಲಭದಿಂದ ನಿನ್ನ ಕೊಂದು ಹಸ್ತಿನಾವತಿ |
ಪೊಳಲ ವಶವ ಗೈವೆ ನೋಡು ನನ್ನ ಕೀರುತಿ || ೩ ||
ಎನ್ನ ಗೆಲುವ ವೀರರಾರು ಕುನ್ನಿ ನೋಡೆಲ |
ನಿನ್ನ ಕನಸು ನಡೆಯದಿಂದು ಖೂಳ ಕೇಳೆಲ ||
ಉನ್ನತಿಕೆಯ ಗಳಹಬೇಡ ಎನ್ನುತಾಗಲೆ |
ಉನ್ನತಾಸ್ತ್ರ ಎಸೆಯೆ ಖೂಳ ತಾಳದಾಗಲೆ || ೪ || [೧೩೦]

**ಭಾಮಿನಿ**
ವರ ಕಿರೀಟಿಯ ಶರದ ಹತಿಗಾ |
ದುರುಳ ತಡವರಿಸುತ್ತಲೋಡಿದ |
ವರ ಮಹಾ ಅಭಿಸಾರಪುರದೆಡೆಗತ್ತ ವಹಿಲದಲಿ ||
ಕರಿಪುರಕೆ ಪಡೆಸಹಿತ ಪಾರ್ಥನು |
ತೆರಳಿದರೆ ವರ ನಾಗಚಿತ್ರನ |
ತರಳೆ ಸ್ವೈರಿಣಿ ಹೊರಟು ಬಂದಳು ವರವಿಲಾಸಿನಿಯು || ೧ || [೧೩೧]

**ತೋಡಿ - ಆದಿ**
ಸುದತಿಯರು ತಾವೊಂದುಗೂಡಿದರು | ಜಲಕೇಳಿಗೆನುತ |
ಮುದದಿ ನೀರಿನೊಳಗೆ ಇಳಿದರು ||
ವದನಗಳಿಗೆ ನೀರನೆರಚಿ |
ಚದುರೆಯರು ತಾವ್ ಸ್ವೇಚ್ಛೆಯಿಂದ |
ಮುದದೊಳಂದು ಮುಳುಗಿ ತೇಲಿ |
ಪದುಳದಿಂದ ಚಂಚಲೆಯರು || ೧ ||
ನೀರಿನಾಟ ಮುಗಿದು ಪೋಗಲು | ಸಂತಸವ ತಳೆದು |
ನೀರೆಯರು ತಾ ವಸನ ಧರಿಸಲು ||
ಸಾರಸಾಂಬಕಿಯರು ಮೆರೆಯೆ |
ಕ್ರೂರದೈತ್ಯ ರೌದ್ರುಕರ್ಮ |
ದೂರದಿಂದ ಕಂಡನಿವರ |
ಭೂರಿ ಹರುಷ ತಾಳುತೆಂದ || ೨ || [೧೩೩]

**ಯಮುನಾಕಲ್ಯಾಣಿ - ಅಷ್ಟ**
ಯಾರಿವಳಮಮ ಚಂದಿರವದನೆ | ಹೊಂತ |
ಕಾರಿಯರೊಡನೊಪ್ಪುತಿಹ ಜಾಣೆ ||
ಮಾರನರಸಿಯಂತೆ ಇಹ ತರುಣಿ | ಈಕೆ |
ಯಾರೆಂಬುದರಿಯೆ ಪನ್ನಗವೇಣಿ || ೧ ||
ಸೋತುಪೋದುದು ಎನ್ನ ಮನವೆಲ್ಲಾ | ಈಗ |
ಮಾತನಾಡಿಸಲೆಂತು ತಿಳಿಯೆನಲ್ಲಾ ||
ಯಾತುಧಾನನ ರೂಪವನು ಕಂಡು | ಈಕೆ |
ಭೀತಿಗೊಂಡರೆ ಮಾಳ್ಪುದೇನೆಂದು || ೨ ||
ಸುಂದರ ರೂಪ ತಾಳುತ ನಾನು | ವರ |
ಚಂದಿರವದನೆಯ ಕೇಳುವೆನು ||
ಸುಂದರಾಂಗನು ಎಂಬ ಪೆಸರಿಂದ | ಖಳ |
ಬಂದರೆ ತಾ ಹೊಸ ರೂಪಿನಿಂದ || ೩ || [೧೩೬]

**ಬೇಗಡೆ - ರೂಪಕ**
ಬಂದನಾಗ ರೌದ್ರುಕರ್ಮನು | ಬಲು ಮಾಯಕದಲಿ |
ಚಂದ್ರಮದನರಂತೆ ಕಂಡನು ||
ಚಂದ್ರಮುಖಿಯ ಆಸೆಯಿಂದ |
ಸುಂದರಾಂಗನೆಂಬ ಪೆಸರ |
ಚಂದದಿಂದಲಿಟ್ಟುಕೊಳುತ |
ಮಂದಮತಿಯು ಮುದದೊಳಂದು || ೧ ||
ಮಾರ ತಾನೆ ನಾಚುವಂದದಿ | ವರ ಸುಂದರಾಂಗ |
ಸಾರಿ ಬಂದನಂದು ವಹಿಲದಿ ||
ವಾರಿಜಾಕ್ಷಿವೃಂದವೆಲ್ಲ |
ನೀರಿನಾಟಗೈದು ಬರಲು |
ನೀರೆಯರನು ತಡೆದು ಪಥದಿ |
ವೀರ ಪೇಳ್ವನಂದು ಮುದದಿ || ೨ || [೧೩೮]

**ಬೇಹಾಗ್ - ಆದಿ**
ಚಂದಿರಮುಖಿ ಸುಮ | ಗಂಧಿನಿ ಕೋಮಲೆ |
ಸುಂದರಿ ನೀನಾರೈ ಅಬಲೆ ||
ಬಂದಿಹೆ ನೀನೆ | ಲ್ಲಿಂದ ಪೇಳೈ |
ಚಂದದೊಳಿಂದಿಲಿ ಗುಣಶೀಲೆ || ೧ ||
ವನಿತಾಮಣಿ ತವ | ಜನನಿ ಜನಕರಾ |
ರೆನುತಲಿ ಪೇಳೈ ಧರೆಯೊಳಗೆ ||
ವನಜಾಂಬಕಿ ನಿನ | ಗಿನಿಯನು ಇರುವನೆ |
ಸನುಮತದಲಿ ಪೇಳೈ ತನಗೆ || ೨ ||
ವಾರಿಜಮುಖಿ ನೀ | ನಾರಿಯರೊಂದಿಗೆ |
ಘೋರವಿಪಿನದೊಳಗಲೆಯುವರೆ ||
ಕಾರಣವೇನಿದೆ | ಮಾರನ ಶರಹತಿ |
ಸಾರಸಮುಖಿ ತಾಳೆನು ಕೇಳೆ || ೩ || [೧೪೧]

**ಕೇದಾರಗೌಳ - ಅಷ್ಟ**
ವರ ವಿಲಾಸಿನಿ ತಾನು | ಸರಸದ ಮಾತಿಗೆ |
ಹರುಷಗೊಳ್ಳುತ ಮನದಿ ||
ವರ ನಾಗಚಿತ್ರ ಕು | ವಲೆಯರ ತರಳೆಯು |
ಪರಿಣಯವಾದುದಿಲ್ಲ || ೧ ||
ಜನಪದದೊಳಗೆ ಸ್ತ್ರೀ | ಸ್ವಾತಂತ್ರ್ಯ ಬೇಕೆಂದು |
ವನಿತೆಯರಿಗೆ ನೋಡಲು ||
ಮನಕೊಪ್ಪಿದಂತೆ ನಾ | ನಡೆಯೆ ಸ್ವತಂತ್ರಳು |
ಅನುಮಾನ ಬೇಡೆನ್ನಲು || ೨ ||
ಧಾರಿಣಿಪನ ಸುಕು | ಮಾರಿಯು ನಾನಿಹೆ |
ಯಾರೆಣೆ ತನಗೆನ್ನುತ ||
ಮಾರಸನ್ನಿಭನಂತೆ | ತೋರುವೆ ನೀನಾರು |
ಈ ರೀತಿ ಕೇಳಲಿಕೆ || ೩ ||
ಚಂದಿರವದನೆಯೆ | ಸುಂದರಾಂಗನು ನಾನು |
ಸಂದೇಹ ಬೇಡೆನ್ನಲಿ ||
ಮುಂದೆಸೆಯುವ ಗಿರಿ | ಗಧಿಪತಿ ನಾನಿಹೆ |
ಚಂದದಿ ವರಿಸೆನ್ನನು || ೪ || [೧೪೪]

**ಭಾಮಿನಿ**
ಇಂತು ಕಪಟಿಯ ಮಾತ ಕೇಳುತ |
ಕಾಂತೆ ಮನದೊಳು ಹರುಷ ತಾಳುತ |
ಕಂತುಶರನುರುಬೆಯಲಿ ಬಸವಳಿಯುತ್ತ ಪೇಳಿದಳು ||
ಹೊಂತಕಾರಿಯೆ ನೀನು ನೋಡಲು |
ಕಂತುಸನ್ನಿಭ ನಿನ್ನ ವರಿಸೆ ಸ್ವ |
ತಂತ್ರಳೆಂದೇ ದಿಟ್ಟತನದೊಳು ತರುಣಿ ತಾ ನುಡಿಯೆ || ೧ || [೧೪೬]

**ಸುರುಟಿ - ಏಕ**
ತರುಣಿಯ ನುಡಿ ಕೇಳಿ | ಖಳಪತಿ |
ಒರೆದನು ಮುದ ತಾಳಿ ||
ಸರಸಿಜಮುಖಿಯೆ | ನ್ನರಸಿಯೆ ಬಾ ಬಾ |
ಪೊರಡುವ ಎಮ್ಮಯ | ಪುರವರಕೆಂದೆನೆ || ೧ ||
ದನುಜೇಶನ ನುಡಿಗೆ | ವನಿತಾ |
ಮಣಿ ನಗುತಲಿ ಕಡೆಗೆ ||
ಸನುಮತದಿಂದಲಿ | ಸಖಿಯರ ತ್ಯಜಿಸುತ |
ದನುಜೇಶನ ಪುರ | ವರಕೆಂದೈದಲು || ೨ ||

ಚಂದಿರಮುಖಿಯೊಡನೆ | ಬಂದನು |
ಸುಂದರಾಂಗ ತಾನೆ ||
ಮಂದಮತಿಯು ಅತಿ | ಕಾಮುಕತನದಲಿ |
ಸುಂದರಿಮಣಿಯನು | ಕೂಡುವೆನೆನ್ನುತ || ೩ ||
ಸರಸಕೆ ಕರೆಯುತಿರೆ | ಮಾಯವು |
ಹರಿದಸುರನೆಯಾಗೆ ||
ತರುಣಿಯು ಬೆದರುತ | ದುರುಳನ ಕೈಯೊಳು |
ಭರದೊಳು ಸಿಲುಕಿದೆ | ಗತಿಯೇನೆನ್ನುತ || ೪ || [೧೫೦]

**ನೀಲಾಂಬರಿ - ರೂಪಕ**
ಏನೆಂಬೆನು ಹಾ ಶಿವನೆ | ದಾನವನಿವನೆಂಬುದನೆ |
ಕ್ಷೋಣಿಯೊಳು ನಾನರಿಯದೆ | ಮಾನಕೆ ಚ್ಯುತಿ ಬಂತೆ ||
ಶ್ವಾನದ ಬಾಳುವೆಯಾಯಿತೆ | ಕಾಣೆನು ಬದುಕಲದೆಂತೀ |
ದಾನವ ತಾ ಬಿಡನೆನ್ನನು | ಏನೆಂಬೆನು ಇದಕೆ || ೧ ||
ಸನ್ನುತ ಸ್ತ್ರೀಸ್ವಾತಂತ್ರ್ಯವ | ಮನ್ನಿಸಿದೆನು ನಾನರಿಯದೆ |
ಉನ್ನತದಾಸೆಯು ಇಂದೇ | ಮಣ್ಣಾದುದು ನೋಡೆ |
ಹೆಣ್ಣಿಗೆ ಹಿರಿಯರ ರಕ್ಷೆಯೆ | ಉನ್ನತಿಕೆಗೆ ಬೇಕೆಂಬುದ |
ಮನ್ನಿಸದೆಯೆ ನಾ ಪೋದರೆ | ಕುನ್ನಿಯ ವಶವಾದೆ || ೨ || [೧೫೨]

**ಸೌರಾಷ್ಟ್ರ - ತ್ರಿವುಡೆ**
ಮರುಗಲೇತಕೆ ತರುಣಿ ಎನ್ನನು |
ವರಿಸು ಪ್ರೇಮದೊಳೆನ್ನ ಪಟ್ಟದ |
ಅರಸಿಯಾಗೆಂದೆನುತ ಖಳ ತಾ | ನೊರೆಯಲಂದು || ೧ ||
ದೈತ್ಯಪತಿ ನಾ ತಪ್ಪುಗೈದೆನು |
ಅರ್ತಿಯಿಂದಲಿ ಬಿಟ್ಟು ಬಿಡು ನಾ |
ಪೆತ್ತವರ ಕಾಣುವರೆ ಪೋಗುವೆ | ಸ್ವಸ್ಥದಿಂದ || ೨ ||
ಯಾರು ಬಂದರು ಬಿಡೆನು ನಿನ್ನನು |
ನಾರಿಮಣಿ ಬಾ ಬಾರೆನುತ್ತಲೆ |
ಮೀರಿ ಬಂದರೆ ಖಳನ ಕಾಣುತ | ನಾರಿ ಬೆದರೆ || ೩ ||
ರಕ್ಷಿಸುವರಾರೆನ್ನನೀ ಕ್ಷಣ |
ರಾಕ್ಷಸನು ತಾ ಮೀರಿ ಬರುತಿಹ |
ಪಕ್ಷಿವಾಹನ ದಯವದೋರೆನು | ತಾ ಕ್ಷಣದೊಳು || ೪ ||
ಅಕ್ಷಿಯೊಳು ಜಲವಿಳಿಸಿ ಕೂಗಲು |
ರಾಕ್ಷಸನು ತಾ ಬಿಡದೆ ಮುಂಬರೆ |
ಈಕ್ಷಿಸುತಲೋಡಿದಳು ನಾರಿಯು | ಆಕ್ಷಣದಲಿ || ೫ || [೧೫೭]

**ವಾರ್ಧಕ**
ಲಾಲಿಸುವುದಾ ವೇಳೆ ಸುಪ್ರತಾಪನು ತನ್ನ |
ಬಾಲಕನ ರಕ್ಷಣೆಯನಪ್ರಮೇಯಿಗೆ ವಹಿಸಿ |
ಲೀಲೆಯಿಂದಲಿ ತಾನು ಸಂಚರಿಸಿ ಬರುತಿರಲು ಸ್ತ್ರೀಯ ರೋದನವು ಕೇಳೆ ||
ತಾಳುತಚ್ಚರಿ ಮನದಿ ಕಂಡನಾ ದಾನವನು |
ನೀಳವೇಣಿಯ ಮಾನಭಂಗಕೆಳಸುವ ಪರಿಯ |
ಕಾಲರುದ್ರನ ತೆರದಿ ಗರ್ಜಿಸುತ ದಾನವನ ತಡೆದೆಂದ ವಿಪಿನದಲ್ಲಿ || ೧ || [೧೫೮]

**ಮಾರವಿ - ಏಕ**
ಬಿಡು ಬಿಡು ತರುಣಿಯ | ಥಡಿಗನೆ ನಿನ್ನಯ |
ಬಿಡೆ ಸುಮ್ಮನೆ ನೋಡೆ ||
ಸಡಗರದೊಳು ಪರ | ತರುಣಿಯ ಬಯಸಲು |
ಬಡಿದಟ್ಟುವೆ ನಿನ್ನ || ೧ ||

ತರಳ ನೀನಾರ್ಕೈ | ತರುಣಿಯ ಬಿಡುಯೆನೆ |
ಅರಸಿಯೆ ನಿನಗಿವಳು ||
ಹರಿ ಹರ ಬಂದರು | ಬಿಡೆ ನಾನಿವಳನು |
ತರಳನೆ ತೆರಳೆನಲು || ೨ ||
ಪರನಾರಿಯರೆನ | ಗನುಜೆ ಸಮಾನರು |
ದುರುಳನೆ ನಿನಗಿಂದು ||
ಹರಿ ಹರರೇತಕೆ | ಹರಿಭಜಕನು ನಾ |
ಶಿರವರಿವೆನು ನಿನ್ನ || ೩ ||
ಪೊಡವಿಯೊಳೆನ್ನಯ | ಪೆಸರನು ಪೇಳ್ವರೆ |
ನಡುಗುವರ್ಕೈ ನೃಪರು ||
ಹುಡುಗನೆ ಸುಮ್ಮನೆ | ಜಡಜಮುಖಿಯ ಬಿಡೆ |
ಬಡಿವಾರವದೇಕೆ || ೪ ||
ಬಿಡೆನನ್ಯಾಯಕೆ | ಮಣಿಯೆನು ನಿಶ್ಚಯ |
ಪೊಡವಿಪ ನಾನಿಹೆನು ||
ದಡಿಗನೆ ಮರಣವು | ಕಾದಿದೆಯೆನುತಲಿ |
ಬಿಡಲಸ್ತ್ರವನಾಗ || ೫ ||
ಅಂದಾ ನೃಪನೊಳು | ಕಾದುತ ದಾನವ |
ಸಂದರೆ ಯಮಪುರಕೆ ||
ಚಂದಿರಮುಖಿ ಆ | ನಂದದಿ ನೃಪನಿಗೆ |
ವಂದಿಸಿ ಪೇಳಿದಳು || ೬ || [೧೬೪]

**ಮೋಹನ - ಅಷ್ಟ**

ಮಾರಸನ್ನಿಭ ನೀನು | ಸರಿಸಮಯಕೆ ಬಂದೆ |
ನಾರಿಯ ಮಾನ ಕಾಯ್ದೆ ||
ವೀರ ನಿನ್ನುಪಕಾರ | ಮರೆಯೆನು ಜನ್ಮಕೆ |
ಯಾರು ನೀನೆಂದುಸುರು || ೧ ||
ಕರೆವರು ಸುಪ್ರತಾ | ಪನು ಎಂಬ ಪೆಸರಿಂದ |
ವರ ಸುಧನ್ವನ ಕುವರ ||
ಸರಸಿಜಮುಖಿ ಪ್ರಭಾ | ವತಿ ಸುಕುಮಾರ ನಾ |
ತರುಣಿ ನೀನಾರು ಪೇಳು || ೨ ||
ಹರುಷಗೊಂಡೆಂದಳು | ಭಾವ ನೀನೆನಗಾದೆ |
ಮೆರೆವಭಿಸಾರವನು ||
ಪೊರೆಯುವ ಧರಣಿಪ | ತನುಜೆ ವಿಲಾಸಿನಿ |
ಅರಿಯೆಯ ಎನ್ನ ನೀನು || ೩ ||
ಮಾನವನುಳಿಸಿದ | ಮಾನವಂತನೆ ಕೇಳು |
ನೀನಲ್ಲದನ್ಯರನ್ನು ||
ಕಾಣೆನು ಕರಪಿಡಿ | ದೆನ್ನನು ಪ್ರೇಮದಿ |
ಕ್ಷೋಣೀಶ ಪೊರೆಯೆಂದಳು || ೪ ||
ವರ ಪ್ರಮೀಳೆಯ ಸುತೆ | ಅರಸಿಯಾಗಿಹಳೆನ್ನ |
ತರಳ ಪ್ರತಾಪರುದ್ರ ||
ಇರುತಿರೆ ನಿನ್ನ ನಾ | ವರಿಸಲು ಪಟ್ಟದ |
ಅರಸಿ ನೀನಾಗಲಾರೆ || ೫ ||
ಮಾನಗಾದವ ನೀನೆ | ಪ್ರಾಣದರಸನಾಗೆ |
ಮಾನಿನಿ ನಾನಾಗುವೆ ||
ನೀನೆನ್ನ ತ್ಯಜಿಸಲು | ಹೀನಳೆಂದೆನ್ನರೆ |
ಕ್ಷೋಣಿಯ ಜನರೆಲ್ಲರು || ೬ || [೧೭೦]

**ಭಾಮಿನಿ**
ಧರ್ಮಸೂಕ್ಷ್ಮವಿಚಾರವಿದು ಕೇಳ್ |
ಮರ್ಮ ತಿಳಿವರೆ ಸಮಯ ಬೇಕೈ |
ನಿರ್ಮಲದ ಮನಸಿನಲಿ ಯೋಚಿಸಬೇಕು ನಾದಿನಿಯೆ ||
ನಮ್ಮ ರಕ್ಷಣೆಯಲ್ಲಿ ಇರುತಿರೆ |
ದುರ್ಮತಗಳಂಜಿಕೆಯು ಇಲ್ಲವು |
ಸನ್ಮತವೆ ಪೇಳೆಂದು ನುಡಿಯಲು ಒಪ್ಪಿ ತಾ ಬರಲು || ೧ || [೧೭೧]

**ವಾರ್ಧಕ**
ಸುಪ್ರತಾಪನು ಅಂದು ವರ ವಿಲಾಸಿನಿಯೊಡನೆ |
ಒಪ್ಪ ವೇಳೆಯೊಳಿತ್ತ ಅಭಿಸಾರಪುರದೊಳಗೆ |
ದರ್ಪದಿಂದೋಲಗವ ನಾಗಚಿತ್ರನು ಕೊಡಲು ದೂತಿಯರು ನಡುಗುತಂದು ||
ತಪ್ಪನೆಸಗಿರೆ ರಾಜನಣುಗೆ ಕಾನನದೊಳಗೆ |
ಒಪ್ಪಲಾರನು ನಮ್ಮ ದೊರೆಯು ಇದ ಕೇಳಿದರೆ |
ಸರ್ಪಭೂಷಣನ ತೆರ ಕೆರಳುವನು ನಿಶ್ಚಯದಿ ಒರೆಯದಿರೆ ಉಳಿಸನೆಮ್ಮ || ೧ || [೧೭೨]

**ಸಾರಂಗ - ಅಷ್ಟ**
ದೊರೆರಾಯ ಲಾಲಿಸಯ್ಯ | ಕರುಣದೊಳೆಮ್ಮ |
ಪೊರೆಯಬೇಕೆಂದು ಜೀಯ ||
ತರಳೆ ವಿಲಾಸಿನಿ | ತೆರಳಲು ವನಕೆಂದು |
ದೊರೆಸುತೆಯೊಡ ನಾ | ತೆರಳಿದೆ ನೋಡಲು || ೧ ||
ಮಾರನಂದದಿ ಪೊಲುವ | ಸುಂದರನೋರ್ವ |
ಸಾರಿ ಬಂದನು ಚೆಲುವ ||
ನಾರಿ ವಿಲಾಸಿನಿ | ಮರುಳಾದಳಾತಗೆ |
ವೀರನ ಕೂಡೆ ತಾ | ಮಾತನಾಡಿಸಿದಳು || ೨ ||
ಮೋಡಿಯ ಗೈದನೇನು | ತವ ಸುತೆಯಳ |
ರೂಢಿಪ ಕೇಳು ನೀನು ||
ಕಾಡಿನೊಳವನೊಡ | ನಾಡಿಯಂತೆಸೆಯುತ |
ಓಡಿದಳವನೊಡ | ನೇನೆಂಬೆ ಸೋಜಿಗ || ೩ || [೧೭೩]

**ಸೌರಾಷ್ಟ್ರ - ತ್ರಿವುಡೆ**
ದೂತಿಯಾಡಿದ ನುಡಿಯ ಕೇಳುತ |
ಖಾತಿಗೊಳ್ಳುತ ನಾಗಚಿತ್ರನು |
ಕಾತರದಿ ಸಚಿವರನು ಕರೆದರೆ | ಆ ತತುಕ್ಷಣದಿ || ೧ ||
ಬಂದು ಮಣಿದಾ ನಾಗಕೇತನು |
ವಂದಿಸುತ ಧರಣಿಪಗೆ ನುಡಿದನು |
ಇಂದು ಕರೆಸಿದುದೇಕೆ ಪೇಳೈ | ಚಂದದೊಳಗೆ || ೨ ||
ಮಣಿದು ಪೇಳಿದ ನಾಗವರ್ಮನು |
ಜನಪ ವೈರಿಗಳೈದಿದರೆ ಪೇಳ್ |
ಸೆಣಸಿ ಕಾಲನ ಪುರವ ತೋರುವೆ | ಕ್ಷಣದಿ ನೋಡೆ || ೩ ||
ಕೇಳಿದರೆ ನೀವೆಲ್ಲ ಎನ್ನಯ |
ಬಾಲೆಯಳ ಸೆಳೆದೊಯ್ದ ವಿಪಿನದಿ |
ಖೂಳನವನನು ಉಳಿಸಬಹುದೆ | ಪೇಳಿರೀಗ || ೪ ||
ಮೆರೆವ ಹುತ್ತಕೆ ಕೈಯನಿಕ್ಕಲು |
ಉರಗ ಕಡಿಯದೆ ಬಿಡುವುದುಂಟೇ |
ದುರುಳನಿದ್ದೆಡೆ ಪೋಪೆ ನಮ್ಮಯ | ಪಡೆಯವೆರಸಿ || ೫ ||
ಏತಕಿದಕನುಮಾನ ಮನದಲಿ |
ಭೂತಳೇಶನೆ ಕೇಳು ನಿನ್ನಯ |
ಜಾತೆಯನು ಸೆಳೆದೊಯ್ದ ಧೂರ್ತನ | ನಾನೆ ತರಿವೆ || ೬ ||

ಪೊರಟರಾಕ್ಷಣ ಪಡೆಯು ಸಹಿತಲೆ |
ತರಳೆಯಿರುತಿಹ ವನಕೆ ಭರದೊಳು |
ಪರಿಕಿಸುತಲಾ ಸುಪ್ರತಾಪನ | ನಾಗಕೇತು || ೭ || [೧೮೨]

**ಭೈರವಿ - ಏಕ**
ಯಾರೆಲೊ ನೀನತಿ ಪೋರ | ಈ |
ನಾರಿಯ ಕದ್ದಿಹ ಚೋರ ||
ತೋರುವೆ ಯಮನಾಲಯವ | ದಯ |
ದೋರೆನು ನಿನಗೆಂದೆನುವ || ೧ ||
ಕದ್ದವನಲ್ಲವು ಕೇಳಾ | ದಯೆ |
ಇದ್ದರು ಕೋರುವನಲ್ಲ ||
ಶುದ್ಧ ಪರಾಕ್ರಮಿ ನಾನು | ದಿಟ |
ವುದ್ಧಟತನ ಬೇಡಿನ್ನು || ೨ ||
ನಮ್ಮಯ ತರುಣಿಯ ಕದ್ದು | ಬಲು |
ಹೆಮ್ಮೆಯ ಗಳಹದಿರಿಂದು ||
ಮಾರ್ಮಲೆಯುವ ಕಾಳಗದಿ | ತವ |
ಹಮ್ಮನು ನಿಲಿಸುವೆ ಜವದಿ || ೩ ||
ಕಾಣುವೆ ನಿನ್ನಯ ಶೌರ್ಯ | ಈ |
ಬಾಣವ ತಾಳಿಕೊ ಶೂರ ||
ಚೂಣಿಯು ಸಡೆದರೆ ಕಡೆಗೆ | ಗತಿ |
ಕಾಣಿಸೆ ಸೇನಾಧಿಪಗೆ || ೪ || [೧೮೬]

**ಶಂಕರಾಭರಣ - ಮಟ್ಟೆ**
ಅನಿತರೊಳಗೆ ನಾಗವರ್ಮ |
ಜನಪನನ್ನು ತಡೆಯುತೆಂದ |
ವನಿತೆಯನ್ನು ಕದ್ದ ನಿನ್ನ | ತನುವ ಛೇದಿಪೆ || ೧ ||
ಇಂಥ ಮಾತು ಬೇಡ ನಿನ್ನ |
ಹೊಂತಕಾರಿಸಖನು ತನ್ನ |
ಭ್ರಾಂತು ಬುದ್ಧಿಯಿಂದ ಮರಣ | ವಾಂತ ನೋಡೆಲ || ೨ ||
ಗೆಳೆಯನನ್ನು ತರಿದ ನಿನ್ನ |
ಉಳಿಸಲಾರೆನೀಗ ತರಿದು |
ನಳಿನಸಖನ ಸುತನ ಬಳಿಗೆ | ಕಳುಹಿಬಿಡುವೆನು || ೩ ||
ಎಂದ ಮಾತ ಕೇಳುತಾಗ |
ಕಂದುಗೊರಳನಂತೆ ಕೆರಳಿ |
ಮಂದಮತಿಯ ಧುರದೊಳಂದು | ಕೊಂದು ಕೆಡಹಿದ || ೪ || [೧೯೦]

**ಕಂದ**
ಅದ ಕಂಡಾ ಪೊಡವಿಪ ತಾ |
ವಧಿಸುವೆ ಖೂಳನ ಧುರವೆಸಗುತಲೆಂದೆನುತಂ ||
ಪದುಳದಿ ಮುಂಬರೆ ಕಂಡಿಳೆ |
ಯಧಿಪಗೆ ಎರಗುತ ವಿಲಾಸಿನಿ ಪಿತನಿಗೆಂದಳ್ || ೧ || [೧೯೧]

**ಮೋಹನ - ಅಷ್ಟ**
ಜನಕನೆ ಬಿನ್ನಹ | ವನು ಕೇಳು ಪ್ರೇಮದಿ |
ತನುಜೆಯು ಸ್ವೇಚ್ಛೆಯಿಂದ ||
ಇನಿತುಗೈಯಲು ನೀನೆ | ಕಾರಣನಾಗಿಹೆ |
ಮನದಿ ಯೋಚಿಸುಯೆಂದಳು || ೧ ||

ತರಳತನದೊಳೆಮ್ಮ | ಉರುತರ ಪ್ರೇಮದಿ |
ಅರುಹದೆ ಬುದ್ಧಿಯನು ||
ಸರಿಯಾದ ರೀತಿಯ | ಕಲಿಸದೆ ಬೆಳಸಿದೆ |
ತರಳೆಯ ಪಿತನೆ ನೀನು || ೨ ||
ಜಲಕೇಳಿಗೆನ್ನುತ | ನಲವಿನಿಂದೈದಲು |
ಒಲವಿಂದ ಬಂದನೋರ್ವ ||
ಚೆಲುವನವನ ಕಂಡು | ಮತಿಯಲ್ಲಿ ಭ್ರಮೆಗೊಂಡು |
ತಳುವದೆ ಸಂಭ್ರಮವ || ೩ ||
ತೆರಳಿದೆ ನಿನ್ನೊಳ | ಗೊರೆಯದೆ ಮೋಹದಿ |
ಉರುತರ ತೋಷದಿಂದ ||
ದುರುಳ ದಾನವನೆಂದು | ತಿಳಿದು ನಾ ಗೋಳಿಡೆ |
ವರ ಸುಪ್ರತಾಪ ಬಂದ || ೪ ||
ದುರುಳನ ತರಿದು ಮಾ | ನವ ಕಾದ ದೊರೆಯಿವ |
ವರ ಸುಧನ್ವನ ತರಳ ||
ಪರಕಿಸೆ ಭಾವನು | ಯೆನಗಾದ ಇವನನೆ |
ವರಿಸುವಾಸೆಯು ತನಗೆ || ೫ ||
ಪ್ರೀತಿಯಿಂದಲಿ ತವ | ಜಾತೆಯ ಪ್ರೇಮದಿ |
ಮಾತುಲತನಯನಿಂಗೆ ||
ಖಾತಿಯನುಳಿದೀಗ | ಪರಿಣಯಗೈವುದು |
ಖ್ಯಾತಿಯು ನಿನಗೆಂದಳು || ೬ || [೧೯೭]

**ಭಾಮಿನಿ**

ದುರುಳ ದಾನವನೊಡನೆ ತೆರಳಿದ |
ತರಳೆಯನು ವರಿಸುವರ ಕಾಣೆನು |
ಪರಿಯನರಿತವನಿವನ ಹೊರತಾರೆನ್ನ ವರಿಸುವರು ||
ಬರಿದೆ ಕೊಲಿಸಿದೆ ಮಂತ್ರಿ ಮುಖ್ಯರ |
ಧುರವ ನಿಲಿಸುತ ಪ್ರೇಮದಿಂದಲಿ |
ಪರಿಣಯವ ನೀ ಗೈವುದೆಂದರೆ ಗರ್ಜಿಸುತಲೆಂದ || ೧ || [೧೯೮]

**ಸೌರಾಷ್ಟ್ರ - ತ್ರಿವುಡೆ**

ಏನ ನುಡಿದೆ ವಿಲಾಸಿನಿಯೆ ನಿನ |
ಗೇನು ಭ್ರಾಂತಿಯೆ ನಿನ್ನ ದೆಸೆಯಿಂ |
ದೂನವೊದಗಿತು ಎನ್ನ ಘನತೆಗೆ | ಮಾನಗೇಡಿ || ೧ ||
ಹೀನತನವನು ನೋಡುತನ್ಯರ |
ಊನನಮ ನಾನೊರೆಯುತ್ತಿದ್ದವ |
ಮಾನಗೇಡಿಯ ಕೃತ್ಯಗೈವೆನೆ | ಕ್ಷೋಣಿಯೊಳಗೆ || ೨ ||
ಕಲಿಸುಧನ್ವನ ತರಳನೀತನೆ |
ಲಲನೆಯಳ ಸೊಕ್ಕಿನಲಿ ಜನಿಸಿದ |
ಕುಲವಿಹೀನನು ಮಾನಗೆಟ್ಟವ | ಭಂಡನಿವನು || ೩ || [೨೦೧]

**ವಾರ್ಧಕ**

ನೋಡೆ ಜಾಮಾತ ದಶಮಗ್ರಹವುಯೆಂದೆಂಬ |
ರೂಢಿಯೊಳಗಿನ ಮಾತು ಸತ್ಯ ನೀನರಿತಿಹುದು |
ರೂಢಿಪಾಲನ ಸುತಗೆ ಹೊರತಾಗಿ ಕುಲಗೇಡಿ ಭ್ರಷ್ಟನಿಗೆ ನಿನ್ನ ಕೊಡೆನು ||
ಆಡಿದಾ ನುಡಿಯು ಬಲು ಕರ್ಣಕರ್ಕಶವಾಗೆ |
ಝಾಡಿಸುತ ಧನುವ ಝೇಂಕಾರಗೈಯುತಲಂದು |
ಮೂಢಮತಿಯವನ ನಾ ಕೊಂದು ಕಳೆವನು ಎನುತ ಸುಪ್ರತಾಪನು ಗಜರುತ || ೧ || [೨೦೨]

**ಭೈರವಿ - ಏಕ**
ಮತಿಹೀನನೆ ಏನೆಂದೆ | ತವ |
ಸುತೆಯಳ ತಪ್ಪಿಗೆ ಬರಿದೆ ||
ಪತಿವ್ರತೆ ಮಮ ಮಾತೆಯಳ | ನೀ |
ಗತಿಹೀನಳು ಎನಿಸಿದೆಯ || ೧ ||
ಜಾರೆಯೆ ಎನ್ನಯ ಜನನಿ | ನಿಜ |
ದೋರದೆ ಗಳಹಿದೆ ಕುನ್ನಿ ||
ಕಾರಣವಿಲ್ಲದೆ ಎನ್ನಾ | ಅವ |
ಜಾರಜನೆಂದೆಯ ಮುನ್ನ || ೨ ||
ಬಿಡೆ ನಿನ್ನನು ನಾ ಬರಿದೆ | ಮದ |
ವಡರಿದ ನಿನ್ನನು ತರಿದೇ ||
ಪೊಡವಿಯೊಳಗೆ ನಾ ಮೆರೆವೆ | ವರ |
ಕಡುಗಲಿ ನಾನೆನ್ನಿಸುವೆ || ೩ ||
ಕದನಕೆ ಬಾರೆಂದೆನುತ | ನೃಪ |
ನೊದಗಲು ಕೊಳುಗುಳಕತ್ತಾ ||
ಮದಮುಖ ರೋಷದೊಳಾಗ | ತಾ |
ವಧಿಸುವೆ ನಿನ್ನನು ಬೇಗ || ೪ ||
ಬಾರೈ ಕಾಳಗಕೆನುತ | ನೃಪ |
ರೀರ್ವರು ಧುರಗೈವುತ್ತ ||
ವೀರರು ಕಾದಿದರಂದು | ಉ |
ಬ್ಬೇರುತ ಕ್ರೋಧದಿ ಮಸೆದು || ೫ || [೨೦೭]

**ವಾರ್ಧಕ**
ಘೋರಯುದ್ಧದೊಳಂದು ಸುಪ್ರತಾಪನು ಮೆರೆದು |
ವೀರತನದೊಳು ನಾಗಚಿತ್ರನಾ ಶಿರಪಿಡಿದು |
ಮಾರಿಗೌತಣವೀವೆನೆನುತಾಗ ಖಡ್ಗವನು ಝಳಪಿಸಲು ಶೌರ್ಯದೊಳಗೆ ||
ಮಾರಪಿತನಾ ನಾಮಸ್ಮರಣೆಯನು ಗೈಯುತ್ತ |
ನಾರದನು ತಾ ಬಂದು ಸುಪ್ರತಾಪನ ತಡೆದು |
ಕ್ರೂರಕೃತ್ಯವು ಬೇಡ ಧರ್ಮಾತ್ಮ ನೀನಿರಲು ಕೊಲಬೇಡ ಇವನನೆನುತ || ೧ || [೨೦೮]

**ಮೋಹನ - ಅಷ್ಟ**
ಮತಿಹೀನ ನೀನಾದೆ | ನಾಗಚಿತ್ರನೆ ನಿನ್ನ |
ಅತಿಶಯ ದರ್ಪ ನೋಡೆ ||
ಕ್ಷಿತಿಯೊಳು ಮುಳುವಾಯ್ತು | ಅತಿಪರಾಕ್ರಮಿ ಈತ |
ಧೃತಿಗೆಟ್ಟೆಯಿಂತು ನೀನು || ೧ ||
ವರ ಚಂಪಕಾಪುರ | ದರಸನಾಚರಿಸಿದ |
ಪರಮ ಏಕಾದಶಿಯ ||
ವರ ಮಹಾವ್ರತಫಲ | ದೊರಕಿತು ನೃಪತಿಗೆ |
ತರಳ ತಾನಿವನುದಿಸೆ || ೨ ||
ಪರಿಶರಣನು ನೋಡೆ | ಪರಮಧಾರ್ಮಿಕನಿವ |
ವರಸುಧನ್ವನ ತರಳ ||
ಬರಿದೆ ಸಂಶಯವೇಕೆ | ಅಳಿಯನು ನಿನ್ನಯ |
ತರಳೆಯ ರಕ್ಷಿಸಿದ || ೩ ||
ಸೃಷ್ಟಿಪತಿಯೆ ನಿನ್ನ | ದುಷ್ಟಬುದ್ಧಿಯ ಬಿಡು |
ಇಷ್ಟದಿ ತರಳೆಯನು ||
ಶ್ರೇಷ್ಠನಾದಳಿಯಗೆ | ಕೊಟ್ಟು ವಿವಾಹವ |
ನಿಷ್ಠದಿಂದೆಸಗು ನೀನು || ೪ || [೨೦೨]

**ಭಾಮಿನಿ**
ಮಂಗಲವು ನಿನಗಪ್ಪುದೆನೆ ಮುನಿ |
ಪುಂಗವನ ನುಡಿ ಕೇಳಿ ನೃಪತಿಯು |
ಕಂಗಳೊಳಗಾನಂದಬಾಷ್ಪವ ಸುರಿಸುತಿಂತೆಂದ ||
ಸಂಗರವು ಬೇಡಿಂದು ಮಾತಿಲಿ |
ಭಂಗಿಸುತ ನಾ ತಪ್ಪಗೈದೆನು |
ಹಿಂಗದೆಯೆ ಮನ್ನಿಸುತ ಕುವರಿಯ ಸ್ವೀಕರಿಸು ಎನಲು || ೧ || [೨೧೩]

**ಸೌರಾಷ್ಟ್ರ - ತ್ರಿವುಡೆ**
ನಾರದರ ಪದಕಮಲಕೆರಗುತ |
ವೀರ ಪೇಳಿದ ನಿಮ್ಮ ಮಾತಿಗೆ |
ವಾರಿಜಾಂಬಕಿಯನ್ನೆ ವರಿಸುವೆ | ಪ್ರೇಮದಿಂದ || ೧ ||
ಮನದ ಸಂಶಯ ತೊಲಗಿತಿಂದಿಲಿ |
ವನಜಮುಖಿಯನು ವರಿಸದಿದ್ದರೆ |
ಜನಪದದೊಳಪವಾದ ಬಪ್ಪುದು | ವನಿತೆಗಿಂದು || ೨ ||
ಆದ ಕಾರಣ ನಾಗಚಿತ್ರನೆ |
ಮೋದದೊಳು ವೈವಾಹವೆಸಗೈ |
ಮೇದಿನಿಪ ವರ ಹಂಸಕೇತನ | ಕೂಡಿಕೊಳುತ || ೩ ||
ನಾರದನ ಸಮ್ಮುಖದಿ ನಡೆದುದು |
ಭೂರಿವಿಭವದೊಳಂದು ಪರಿಣಯ |
ಆ ರಸೆಯ ಜನರೆಲ್ಲ ಸಂತಸ | ತೋರಲಂದು || ೪ || [೨೧೭]

**ವಾರ್ಧಕ**
ಪುಣ್ಯಚರಿತೆಯನಿದನು ಸನ್ಮತದೊಳೊದಗಿಸಲು |
ಬೆಣ್ಣೆಮನೆ ಗೋಪಾಲಕೃಷ್ಣರೆಂದೆನಿಪ ಮಮ |
ಸನ್ಮಿತ್ರರಾಶಯದಿ ತಿಳಿದಂತೆ ಬರೆದೆನಿದ ಯಕ್ಷಗಾನದಲಿ ಮುದದಿ ||
ಉನ್ನತದ ಕಲೆಯೊಳಗೆ ಸಿದ್ಧಿಯನು ಪಡೆದು ಸ |
ನ್ಮಾನ್ಯರಾಗಿಹ ಅಗರಿ ಶ್ರೀನಿವಾಸರ ತನಯ |
ಸಣ್ಣವನು ಭಾಸ್ಕರನು ಶ್ರೀಹರಿಯ ದಯದಿಂದ ಧರೆಗೆ ಮಂಗಲವಾಗಲಿ || ೧ || [೨೧೮]

*****ಶುಭಂ*****

# ಕೃತಜ್ಞತೆಗಳು


**ಅಂತರಜಾಲ ಪ್ರಕಾಶನ ಪ್ರಾಯೋಜಕರು :** ನಿರೀಕ್ಷಿಸಲಾಗಿದೆ.

**ಮೂಲ ಪ್ರಕಾಶಕರು :** ಸೇವಧಿ ಪ್ರಕಾಶನ ಹೇರಂಜೆ ಕೃಷ್ಣ ಭಟ್ಟ

**ಪ್ರಸಂಗ ಪ್ರತಿ ಆಧಾರ :** ಪ್ರಸಂಗಕರ್ತರ ಮೂಲ ಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು :** ಅಗರಿ ಭಾಸ್ಕರ ರಾವ್

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ :** ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ಬರವಣಿಗೆ :** ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ತಿದ್ದುಪಡಿ :** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ಉತ್ಪಾದನೆ :** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ :** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ